ಡಾ.ಎಚ್.ಜೆ.ಲಕ್ಕಪ್ಪಗೌಡ

ವ್ಯಕ್ತಿ ಪರಿಚಯ



ಡಾ. ಹಂಪನಹಳ್ಳಿ ತಿಮ್ಮೇಗೌಡ

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೩೮

ಡಾ. ಎಚ್.ಜೆ. ಲಕ್ಕಪ್ಪಗೌಡ

ವ್ಯಕ್ತಿ ಪರಿಚಯ

ಡಾ. ಹಂಪನಹಳ್ಳಿ ತಿಮ್ಮೇಗೌಡ

ಕರ್ನಾಟಕ ಜಾನಪದ ಪರಿಷತ್ತು
ನಂ.1, ಜಲದರ್ಶಿನಿ ಲೇ ಔಟ್,
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

DR. H.J. LAKKAPPA GOWDA-
A pen portrait - by Dr. HAMPANAHALLI TIMME GOWDA.
Published by : KARNATAKA JANAPADA PARISHATHU,
No.1, Jaladarshini Layout (Near M.S. Ramaiah Hospital Gate),
New B.E.L. Road, Bengalooru - 560 054. Ph : 080-23605033
Pages : 44 Price : Rs. 15 2009.

ಪ್ರಥಮ ಮುದ್ರಣ ೨೦೦೯

ಪ್ರತಿಗಳು ೨೦೦೦

ಪುಟಗಳು ೪೪

ಬೆಲೆ ರೂ.೧೫ (ಹದಿನೈದು ರೂಪಾಯಿ)

ಹಕ್ಕುಗಳು ಲೇಖಕರಿಗೆ ಸೇರಿವೆ

ಗ್ರಂಥ ಪ್ರಕಟಣಾ ಸಲಹಾ ಸಮಿತಿ

ನಾಡೋಜ ಡಾ. ಜಿ. ನಾರಾಯಣ ಅಧ್ಯಕ್ಷರು
ಶ್ರೀ ಟಿ. ತಿಮ್ಮೇಗೌಡ ಸದಸ್ಯರು
ಶ್ರೀಮತಿ ಇಂದಿರಾ ಬಾಲಕೃಷ್ಣ ಸದಸ್ಯರು
ಶ್ರೀ ಗೊ.ರು. ಚನ್ನಬಸಪ್ಪ ಸದಸ್ಯರು
ನಾಡೋಜ ಡಾ. ಸಿದ್ಧಲಿಂಗಯ್ಯ ಸದಸ್ಯರು
ಡಾ. ಎಂ. ಎ. ಜಯಚಂದ್ರ ಸದಸ್ಯರು
ಪ್ರೊ. ಡಿ. ಲಿಂಗಯ್ಯ ಸಂಪಾದಕರು
ಡಾ. ಚಕ್ಕೆರೆ ಶಿವಶಂಕರ್ ಕಾರ್ಯದರ್ಶಿ–ಸಂಚಾಲಕರು

ಮುದ್ರಕರು ಕೃತಿಕ ಪ್ರಿಂಟ್–ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು – 560 030
ಮೊಬೈಲ್ – 98441 14958

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ' ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ಅಥವಾ ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಡಾ. ಹಂಪನಹಳ್ಳಿ ತಿಮ್ಮೇಗೌಡ ಅವರು ಡಾ. ಎಚ್.ಜೆ. ಲಕ್ಕಪ್ಪಗೌಡ** ಅವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆದು ಕೇಳಿಕೊಳ್ಳುತ್ತೇನೆ.

ನಾಡೋಜ ಡಾ. ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು
೧೬-೦೮-೨೦೦೯

ಡಾ. ಎಚ್.ಜೆ. ಲಕ್ಕಪ್ಪಗೌಡ

ಡಾ. ಎಚ್. ಜೆ. ಲಕ್ಕಪ್ಪಗೌಡರು ಕೊಂಪೆಯಾದ ಹಂಪಾಪುರದಿಂದ ಹಂಪಿನ ಕನ್ನಡ ವಿಶ್ವವಿದ್ಯಾನಿಲಯದ ಕುಲಪತಿ ಹುದ್ದೆಯವರೆಗೆ ನಿರಂತರವಾಗಿ ಬೆಳೆದು ಬಂದವರು. ಅವರ ಬೆಳವಣಿಗೆಯ ಹಾದಿ ಸುಗಮವಾಗಿಯೇನು ಇರಲಿಲ್ಲ. ಹಲವಾರು ಕಲ್ಲು ಮುಳ್ಳುಗಳನ್ನು ತುಳಿದು ನಡೆದ ಹಾದಿ ಮುಂದೊಂದು ದಿನ ಸುಗಮ ಹಾದಿಗೆ ನಾಂದಿಹಾಡಿತು. ಬಡತನದಲ್ಲಿ ಹುಟ್ಟಿ ಅದನ್ನೇ ಉಂಡು ಹೊದ್ದು ಬೆಳೆದವರು. ಅವರಿಗೆ ಎದುರಾದ ಹಲವು ಪ್ರವಾಹೋಪಾದಿಯ ಕಷ್ಟಗಳನ್ನೆಲ್ಲ ದಾಟಿ ಈಸಿ ಬಂದವರು. ಹಲವಾರು ಏಳುಬೀಳುಗಳನ್ನು ಧೈರ್ಯವಾಗಿ ಗೆದ್ದು ಜಯಿಸಿ ಬಾಳದೋಣಿಯನ್ನು ಮುನ್ನಡೆಸಿಕೊಂಡು ಸುಖದ ಹಾದಿಯನ್ನು ಕಂಡುಕೊಂಡವರು.

ಲಕ್ಕಪ್ಪಗೌಡರು ಕನ್ನಡ ನಾಡು ಕಂಡ ಕ್ರಿಯಾಶೀಲ ವ್ಯಕ್ತಿ. ಸರಳ ಸಜ್ಜನಿಕೆಯನ್ನು ಮೈಗೂಡಿಸಿಕೊಂಡ ಸಭ್ಯ ವ್ಯಕ್ತಿತ್ವ. ನಿರಾಡಂಬರ, ನಿಷ್ಕಪಟವಾದ ಮನಸ್ಸಿನ ತುಂಬಿದ ಕೊಡ. ಶ್ರದ್ಧೆ, ಸೌಜನ್ಯ, ಸುಶೀಲತೆಯನ್ನು ಹೊಂದಿದ್ದು ಉನ್ನತ ಆಲೋಚನೆ, ಚಿಂತನಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ತೆರೆದ ಮನಸ್ಸು, ಸಮಚಿತ್ತತೆ ಉಳ್ಳವರು. ಯಾವುದೇ ಪೂರ್ವಾಗ್ರಹಗಳಿಲ್ಲದವರು. ಎಲ್ಲರನ್ನೂ ಹಸನ್ಮುಖಿಯಾಗಿ, ಆರೋಗ್ಯಪೂರ್ಣ ಧೋರಣೆಯಿಂದ ಸ್ವಾಗತಿಸುವಂತಹ ಅಜಾತಶತ್ರು. ಮೃದು ಸ್ವಭಾವದ ಸುಸಂಸ್ಕೃತರು. ತಮ್ಮ ಸತತ ಅಧ್ಯಯನದ ಫಲವಾಗಿ ಗಂಟೆಗಟ್ಟಲೆ ನಿರರ್ಗಳವಾಗಿ ರಾಕೆಟ್ ವೇಗದಲ್ಲಿ ಮಾತನಾಡುವುದು ಅವರಿಗೆ ಕರಗತವಾಗಿರುವ ಕಲೆ. ಅವರ ಬದುಕು ಮತ್ತು ಬರಹ ಎರಡೂ ಒಂದೇ ತೆರನಾದವು. ಹಲವಾರು ಉನ್ನತ ಹುದ್ದೆಗಳನ್ನು ಹೊಂದಿದ್ದರೂ ಯಾವೊತ್ತೂ ಗತ್ತು ಗಮ್ಮತ್ತು ತೋರಿದವರಲ್ಲ. ಅಧ್ಯಾಪಕರಾಗಿದ್ದಾಗ ಹೇಗಿದ್ದರೋ ಕುಲಪತಿಯಾಗಿದ್ದಾಗಲೂ ಅದೇ ನಡವಳಿಕೆ.

ಅವರ ಹಾಗೆ ಇದ್ದವರು ಇಂದು ಪಟ್ಟಣದಲ್ಲಿ ಮೋಜು ಜೀವನ ನಡೆಸುತ್ತಿದ್ದರೆ, ಲಕ್ಕಪ್ಪಗೌಡರು ತಾವು ಹುಟ್ಟಿ ಬೆಳೆದ ಹಳ್ಳಿಯಲ್ಲಿ ವಾಸಮಾಡುತ್ತಿದ್ದಾರೆ. ಅದೇ ಮಾತೃಭೂಮಿಯ ವಾತ್ಸಲ್ಯ. ಮಣ್ಣಿನ ಋಣ ತೀರಿಸುವ ಪರಿ. ಅಪ್ಪಟ ಕೃಷಿಕರಾಗಿ ಈಗ ಬದುಕುತ್ತಿದ್ದಾರೆ. ಯಾವುದೇ ವಾಹನವಿಲ್ಲದೇ ಸರ್ಕಾರಿ ಬಸ್ಸುಗಳಲ್ಲೇ ಕಾಲ್ನಡಿಗೆಯಲ್ಲೇ ಓಡಾಡಿಕೊಂಡು ಜೀವನ ಮಾಡುತ್ತಿರುವುದೇ ಅವರ ಸರಳ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ.

ಲಕ್ಕಪ್ಪಗೌಡರು ಹಿಂದುಳಿದ ವರ್ಗದ ಮೊದಲ ತಲೆಮಾರಿನವರಾಗಿದ್ದು, ತಮ್ಮ ಚಲನಶೀಲ ಚಿಂತನೆ, ಕ್ರಿಯಾಶೀಲತೆಯ ಮೂಲಕ ಕರ್ನಾಟಕದ ಸಮಕಾಲೀನ ಸಾಂಸ್ಕೃತಿಕ ಪರಿಸರದೊಂದಿಗೆ ರೂಪುಗೊಂಡವರು. ಆದರೆ ಕೆಳಹಂತದಿಂದ ಬಂದ ಕಾರಣದಿಂದಲೇ ಮೇಲೇರಲು ಸಾಧ್ಯವಿಲ್ಲ ಎಂದು ಕಂಡುಕೊಂಡಂಥವರು. ಶ್ರದ್ಧಾವಂತ ಬರಹಗಾರರಾದ ಅವರು ಕನ್ನಡ ಸಾಹಿತ್ಯ, ಸಂಸ್ಕೃತಿ, ಜಾನಪದ, ಕಾನೂನು, ಆಡಳಿತ ಮತ್ತು ಸಂಘಟನೆಯಲ್ಲಿ ವಿಶೇಷ ಸಾಮರ್ಥ್ಯ ತೋರಿದವರು. ಶಿಷ್ಟ ಹಾಗೂ ಜಾನಪದ ಎರಡು ಕ್ಷೇತ್ರಗಳಲ್ಲಿಯೂ ವಿದ್ವಾಂಸರಾಗಿ ಅಖಂಡ ಶೈಕ್ಷಣಿಕ ಸೇವೆಯೊಂದಿಗೆ ಅಗಾಧ ಆಡಳಿತ ಅನುಭವವನ್ನು ಹೊಂದಿರುವ ವೈವಿಧ್ಯಮಯ ವ್ಯಕ್ತಿತ್ವದ ಪ್ರತಿಭಾವಂತ ಸಾಹಿತಿ, ಸ್ವೋಪಜ್ಞ ಕವಿ. ದೇ.ಜ.ಗೌ., ತೀ.ನಂ.ಶ್ರೀ, ಡಿ.ಎಲ್.ಎನ್., ಜಿ.ಎಸ್.ಎಸ್., ಚಿದಾನಂದಮೂರ್ತಿಯಂತಹ ದಿಗ್ಗಜ ಗುರು ಪರಂಪರೆ, ಹಾ.ಮಾ.ನಾ., ಎಚ್.ಎಲ್. ನಾಗೇಗೌಡರಂತಹವರ ಮಾರ್ಗದರ್ಶನ, ಎಚ್. ತಿಪ್ಪೇರುದ್ರಸ್ವಾಮಿ, ಜೀ.ಶಂ.ಪ, ಸಿ.ಪಿ.ಕೆ., ರಾ.ಗೌ. ಮುಂತಾದವರೊಂದಿಗಿನ ಸ್ನೇಹ, ಒಡನಾಟ, ಎಸ್.ವಿ. ಪರಮೇಶ್ವರಭಟ್ಟರ ಸಂಪೂರ್ಣ ಸಹಕಾರ ಮತ್ತು ಗುರುತ್ವ ಇವೆಲ್ಲವುಗಳೂ ಕೂಡ ಇವರ ಮೇಲೆ ತುಂಬಾ ಪ್ರಭಾವವನ್ನು ಬೀರಿವೆ.

ಅವರು ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಹಂಪಾಪುರದವರು. ಹುಟ್ಟಿದ್ದು ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರ ಹೋಬಳಿಯ ಗೊರಹಳ್ಳಿ ದಾಖಲೆಯ ತಾಯಿಯ ಊರಾದ

ಅಲಪನಾಯಕನಹಳ್ಳಿಯಲ್ಲಿ, ೧೮-೫-೧೯೩೭ರಂದು. ತಂದೆ ಜವರೇಗೌಡ, ತಾಯಿ ಕಾಳಮ್ಮ. ಪ್ರಾಥಮಿಕ ಶಿಕ್ಷಣ ಸ್ವಂತ ಊರಿನಲ್ಲಿ, ಮಾಧ್ಯಮಿಕ ಮತ್ತು ಪ್ರೌಢಶಿಕ್ಷಣ ಬೆಟ್ಟದ ಪುರದಲ್ಲಿ. ಪಿ.ಯು.ಸಿ. ಕೋಣನೂರಿನಲ್ಲಿ. ಆಗ 'ಹೆಮ್ಮೆ' ಎಂಬ ಕವನ ಬರೆದು, ಅದು ಮಾಸ್ತಿಯವರ ಜೀವನ ಪತ್ರಿಕೆಯಲ್ಲಿ ಪ್ರಕಟವಾಯಿತು. ಜೊತೆಗೆ ಮಾಸ್ತಿಯವರಿಂದ ಅಭಿನಂದನೆಯ ಕಾರ್ಡು ಕೂಡ ಬಂದಿತು. ಎಸ್.ಎಸ್.ಎಲ್.ಸಿ. ಯಲ್ಲಿದ್ದಾಗಲೇ ಜನಪದ ಕಥಾನಕವನ್ನು ಆಧರಿಸಿ 'ವೀರವನಿತೆ' ಎಂಬ ಮೂರು ನೂರು ಪುಟದ ಕಾದಂಬರಿ ರಚನೆ, ಅದು ಇನ್ನೂ ಅಚ್ಚಾಗಿಲ್ಲ. ಪ್ರೌಢಶಾಲೆಯಲ್ಲಿದ್ದಾಗಲೇ ಪತ್ತೆದಾರಿ ಕಾದಂಬರಿ, ಪ್ರಗತಿಶೀಲ ಕಾದಂಬರಿಗಳನ್ನು ಓದುವ ಅಭ್ಯಾಸ ಕರಗತವಾಗಿತ್ತು. ಆಗಲೇ ಕುವೆಂಪು ಬಗ್ಗೆ, ಅವರ ಸಾಹಿತ್ಯದ ಬಗ್ಗೆ, ಕೇಳಿ ತಿಳಿದುಕೊಂಡಿದ್ದರು. ಕುವೆಂಪು ಬಗ್ಗೆ ಅಪಾರವಾದ ಅಭಿಮಾನ, ಗೌರವ. ಪಿ.ಯು.ಸಿ.ಯಲ್ಲಿ ವಿಜ್ಞಾನ ಓದಿದ್ದು, ಅವರ ಚಿಕ್ಕಪ್ಪನವರಿಗೆ ಹುಡುಗ ಎಂಜಿನಿಯರ್ ಆಗಬೇಕೆಂಬ ಆಸೆ. ಆದರೆ ಇವರನ್ನು ಆಕರ್ಷಿಸಿದ್ದು ಸಾಹಿತ್ಯ. ಗುರು ಪ್ರೇರಣೆಯೂ ಅದಕ್ಕೆ ಒತ್ತಾಸೆಯಾಯಿತು. ಚಿಕ್ಕಂದಿನಿಂದಲೇ ಮೂಢನಂಬಿಕೆ ಬಗ್ಗೆ ವಿರೋಧ, ವೈಚಾರಿಕ ಆಲೋಚನೆ, ಹೈಸ್ಕೂಲಿನಲ್ಲಿದ್ದಾಗ ಸ್ಕಾಲರ್‌ಶಿಪ್ ಫಾರಂಗೆ ಸಹಿಹಾಕಿಸಿಕೊಂಡು ಬಂದ ಹಣವನ್ನು ಗುಳುಂ ಮಾಡಿ ರಶೀದಿಗೆ ಸಹಿಪಡೆದುಕೊಳ್ಳುತ್ತಿದ್ದ ಹೆಡ್ ಮಾಸ್ಟರ್ ಬಗ್ಗೆ ವಿರೋಧ. ಮೂಗರ್ಜಿಯನ್ನು ಬರೆದದ್ದು ಉಂಟು. ಆನಂತರ ತನಿಖೆಯಾಗಿ ಹೆಡ್‌ಮಾಸ್ಟರ್‌ಗೆ ಶಿಕ್ಷೆಯಾಯಿತು. ಒಮ್ಮೆ ತಮ್ಮ ಸಹಪಾಠಿ ವಿದ್ಯಾರ್ಥಿಗೆ ಪುಸ್ತಕ ಮಾರಿ, ಹಣ ಪಡೆಯಲು ಸಾಹಸವನ್ನೇ ಮಾಡಬೇಕಾಯಿತು. ಆ ಹುಡುಗನ ತಾಯಿ ದೋಸೆಯನ್ನು ತಂದು ಒಡ್ಡಿದ ಕೈಮೇಲೆ ದೊಪ್ಪನೆ ಎತ್ತರದಿಂದ ಹಾಕಿದಳು. ಹಣಕೊಟ್ಟಾಗ ಇಪ್ಪತ್ತೈದು ಪೈಸೆ ಕಡಿಮೆ ಇತ್ತು. ಏಕೆ ಎಂದು ಕೇಳಿದಾಗ ಆ ಹುಡುಗ ಹೇಳಿದ್ದು ನಾಲ್ಕಾಣೆಯು ದೋಸೆ ಕೊಟ್ಟಿದ್ದಕ್ಕಾಯಿತು ಎಂದು ಹೇಳಿದಾಗ ಆದ ನೋವು ಹೇಳತೀರದು. ಹೀಗೆ ಚಿಕ್ಕಂದಿನಿಂದಲೇ ಅಸಮಾನತೆ, ಅನ್ಯಾಯಗಳನ್ನು ಕಂಡು ನೊಂದಿದ್ದೇ ಮುಂದೆ ಸಮಾನ ಸಮಾಜದ ಕನಸು ಕಾಣಲು ಹಾಗೂ ವೈಚಾರಿಕವಾಗಿ ಬೆಳೆಯಲು ಕಾರಣವಾಯಿತು.

ಮುಂದೆ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪದವಿ ವಿದ್ಯಾಭ್ಯಾಸ ನಡೆಯಿತು. ಕನ್ನಡ ಸಾಹಿತ್ಯ ಐಚ್ಛಿಕ ವಿಷಯ. ಸಾಹಿತ್ಯದ ಬಗ್ಗೆ ಹೆಚ್ಚು ಆಸಕ್ತಿ ಬೆಳೆಯಲು ಮೂಲ ಕಾರಣ ಚಿಕ್ಕಂದಿನಲ್ಲಿ ತಾಯಿ, ದೊಡ್ಡಮ್ಮ, ಚಿಕ್ಕಮ್ಮನವರು ರಾಗಿಬೀಸುವಾಗ ಹಾಡುತ್ತಿದ್ದ ಹಾಡುಗಳು. ತಂದೆಯೂ ಕೂಡ ನಾಟಕ, ಯಕ್ಷಗಾನ, ಭಜನೆ, ರಾಮಾಯಣ, ಮಹಾಭಾರತ, ಶನಿಮಹಾತ್ಮೆ, ಮದ್ದಲೆ ಬಾರಿಸುವುದು, ಹರಿಕತೆಗಳ ಬಗ್ಗೆ ವಿಶೇಷ ಆಸಕ್ತಿ ಹೊಂದಿದವರಾಗಿದ್ದರು. ಲಕ್ಕಪ್ಪಗೌಡರು ಇದೆಲ್ಲದರ ಪರಿಣಾಮವಾಗಿ ಅಪಾರ ಪ್ರಭಾವಿತರಾದರು. ತಾತ ಕೂಡ ರಾಮಾಯಣ, ಮಹಾಭಾರತ, ಅಮರ ಕೋಶ ಓದುತ್ತಿದ್ದರು. ಆದ್ದರಿಂದ ಇವರು ಚಿಕ್ಕಂದಿನಿಂದಲೇ ವಚನಕಾರರ, ದಾಸರ ಪದ್ಯಗಳನ್ನು ರಾಗವಾಗಿ ಹಾಡುತ್ತಿದ್ದರು. ಜೋಗಿ ಹಾಡುಗಳನ್ನು, ಭಜನೆ ಪದಗಳನ್ನು ಹಾಡುವ ರೂಢಿ ಚಿಕ್ಕಂದಿನಲ್ಲೇ ಇತ್ತು. ಇದೆಲ್ಲದರ ಪರಿಣಾಮವೇ ಎಂಜಿನಿಯರ್ ಆಗಬೇಕಾಗಿದ್ದ ಹುಡುಗನನ್ನು ಸಾಹಿತ್ಯದ ವಿದ್ಯಾರ್ಥಿಯನ್ನಾಗಿ ಮಾಡಿ ದೊಡ್ಡ ಸಾಹಿತಿಯಾಗುವಂತೆ ಮಾಡಿತು. ಕಾಲೇಜಿನಲ್ಲಿದ್ದಾಗಲೇ ಕಥೆಗಳನ್ನು ಬರೆಯುತ್ತಿದ್ದರು. ಕಥೆಗಳು ಪದ್ಯಗಳು ತಾಯಿನಾಡು ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದವು. ಆಗ ಅವರ ಕಾವ್ಯನಾಮ 'ಶ್ರೀವಸಂತ' ಎಂದು. ಎಂ.ಎ. ಪದವಿ ಮೈಸೂರಿನ ಮನಸಗಂಗೋತ್ರಿಯಲ್ಲಿ. "ಶ್ರೀರಾಮಾಯಣ ದರ್ಶನಂ: ಒಂದು ವಿಮರ್ಶಾತ್ಮಕ ಅಧ್ಯಯನ" ಎಂಬ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ ಪಿ.ಎಚ್.ಡಿ. ಪದವಿಯನ್ನು ಪಡೆದರು.

ಲಕ್ಕಪ್ಪಗೌಡರು ಪ್ರಾರಂಭದಲ್ಲಿ ಹಾಸನ ಹಾಗೂ ಹೊಳೆನರಸೀಪುರುದಲ್ಲಿ ಪ್ರೌಢಶಾಲಾ ಶಿಕ್ಷಕರಾಗಿದ್ದರು. ಒಮ್ಮೆ ದೇ.ಜ.ಗೌ. ಅವರು ಕ್ಷೇತ್ರಕಾರ್ಯ ಮಾಡಲು ಹೊಳೆನರಸೀಪುರಕ್ಕೆ ಬಂದಿದ್ದಾಗ ಇವರ ಸ್ನೇಹಿತರು ಹಾಗೂ ಹಿಂದಿ ವಿದ್ವಾಂಸರಾಗಿದ್ದ ಶ್ರೀ ಎನ್.ಎಸ್. ರಾಮಪ್ರಸಾದ್ ಅವರು ದೇ.ಜ.ಗೌ ಬಳಿಗೆ ಕರೆದೊಯ್ದು ಪರಿಚಯಿಸಿ ಇವರ ಸಾಧನೆಗಳನ್ನು ಹೇಳಿದರು. ಈ ವೇಳೆಗಾಗಲೆ ಗೌಡರು ನವ್ಯ ಕವಿತೆಗಳನ್ನು ಬರೆಯುತ್ತಿದ್ದರು. ಅವು ಆಗಾಗ 'ಗೋಕುಲ' ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದವು. ಇದೇ ಸಂದರ್ಭದಲ್ಲಿ

ಪುರಂದರದಾಸರ ಪೂರ್ವಾಶ್ರಮವನ್ನು ಕುರಿತು ಬರೆದ 'ತಮಸ್ಸಿನಿಂದ ಜ್ಯೋತಿಗೆ' ಎಂಬ ನಾಟಕವನ್ನು ಸ್ನೇಹಿತರಾದ ರಾಮಪ್ರಸಾದ್ ರಂಗಕ್ಕೆ ತಂದರು. ಅದು ಅತ್ಯಂತ ಹೆಚ್ಚು ಜನಪ್ರಿಯವಾಗಿ ಜನ ಮನ್ನಣೆಗಳಿಸಿತು. ಈ ಅವಧಿಯಲ್ಲಿಯೇ ಮದುವೆಯಾಯಿತು. ಜೊತೆಗೆ ಮೊದಲ ಕವನ ಸಂಕಲನ 'ವಸಂತಗೀತ' ಪ್ರಕಟವಾಯಿತು. ಈ ಕೃತಿಗೆ ಡಾ.ಜಿ.ಎಸ್.ಶಿವರುದ್ರಪ್ಪನವರು ಮುನ್ನುಡಿ ಬರೆದಿದ್ದಾರೆ ಡಾ.ಶಿವರಾಮಕಾರಂತರಿಂದ ಬಿಡುಗಡೆಯಾಯಿತು. ಅದು ಇವರ ಬಾಳಿನ ಸಾರ್ಥಕ ಕ್ಷಣವಾಗುವುದರೊಂದಿಗೆ, ಅವರ ಮಾತುಗಳು ಇವರನ್ನು ಹುರಿದುಂಬಿಸಿದವು.

ದೇ.ಜ.ಗೌ. ಅವರನ್ನು ಭೇಟಿ ಮಾಡಿದಾಗ ಮೈಸೂರಿಗೆ ಬಂದು ಕಾಣುವಂತೆ ಹೇಳಿದರು. ಮುಂದೆ ಅವರ ಸಹಾಯದಿಂದ ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಸೇರಿದರು. ಅಲ್ಲಿ ಮುಖ್ಯಸ್ಥರಾಗಿದ್ದ ಹಾಗೂ ಪ್ರಸಿದ್ಧ ಪ್ರಕಾಶಕರಾಗಿದ್ದ ಪ್ರೊ.ಎಚ್.ಎಂ. ಶಂಕರನಾರಾಯಣ ಅವರು ಗೌಡರನ್ನು ಆತ್ಮೀಯವಾಗಿ ಬರಮಾಡಿಕೊಂಡರು. ಅವರ ಕೆಲಸದ ಬಗ್ಗೆ ತುಂಬಾ ಮೆಚ್ಚುಗೆ ವ್ಯಕ್ತಪಡಿಸಿದರು. ಅಲ್ಲಿದ್ದ ಕೇವಲ ಎಂಟು ತಿಂಗಳ ಉಪನ್ಯಾಸಕ ವೃತ್ತಿ ಅವರ ಅಧ್ಯಯನವನ್ನು ಹಾಗೂ ಬುದ್ಧಿಶಕ್ತಿಯನ್ನು ಗಮನಾರ್ಹವಾಗಿ ಹೆಚ್ಚಿಸಿತು. ಅನಂತರ ದೇ.ಜ.ಗೌ. ಸಲಹೆ ಮೇರೆಗೆ ಖಾಯಂ ವೃತ್ತಿಯನ್ನು ಬಿಟ್ಟು ತಾತ್ಕಾಲಿಕ ಉಪನ್ಯಾಸಕರಾಗಿ ಮಹಾರಾಜಾ ಕಾಲೇಜಿಗೆ ಬಂದರು. ಇದು ಜಿ.ಎಚ್. ನಾಯಕರು ಸಂಶೋಧನೆಗೆಂದು ರಜೆ ಹಾಕಿದ್ದ ಹುದ್ದೆ. ಆದರೆ ನಾಯಕರು ಯು.ಜಿ.ಸಿ. ಹೊಸ ವೇತನ ಶ್ರೇಣಿ ಪ್ರಯುಕ್ತ ತಕ್ಷಣ ರಜೆ ರದ್ದುಪಡಿಸಿ ವಾಪಸ್ ಬಂದರು. ಲಕ್ಕಪ್ಪಗೌಡರು ಕೆಲಸ ಕಳೆದುಕೊಂಡು ಮನೆಗೆ ಬಂದರು. ಮೈಸೂರಿನಲ್ಲಿ ಸಂಸಾರ, ಕೈಯಲ್ಲಿ ಕೆಲಸವಿಲ್ಲ. ಮನೆಯಿಂದ ಹಣ ತರುವ ಸ್ಥಿತಿಯಲ್ಲಿಲ್ಲ. ಸಹಾಯ ಮಾಡುವ ಬಂಧುಗಳಿಲ್ಲ. ಇದರಿಂದ ದೇ.ಜ.ಗೌ. ಕೂಡ ತುಂಬಾ ಬೇಸರ ಮಾಡಿಕೊಂಡರು. ಆಗ ಗೌಡರೇ ದೇ.ಜ.ಗೌ ಅವರಿಗೆ ಸಮಾಧಾನ ಮಾಡಿದರು.

ಮುಂದೆ ನಾಲ್ಕೈದು ತಿಂಗಳು ಕಳೆದ ಅನಂತರ ಪುನಃ ದೇ.ಜ.ಗೌ ಅವರೇ ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧನಾ ಸಹಾಯಕನಾಗಿ ಸೇರಿಸಿದರು. ಅನಂತರ ಅಲ್ಪ ಅವಧಿಯಲ್ಲಿಯೇ ಸಂಜೆ ಕಾಲೇಜಿಗೆ ಉಪನ್ಯಾಸಕರಾದರು. ಅಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದ ಪ್ರೊ. ತ.ಸು. ಶಾಮರಾಯರು, ಹಿರಿಯ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳ ನಡುವಣ ಸಂಬಂಧದಿಂದ ಅಧ್ಯಯನ ಹಾಗೂ ಕರ್ತವ್ಯ ಪ್ರಜ್ಞೆ ಹೆಚ್ಚಾಯಿತು. ಅದೇ ಸಂದರ್ಭದಲ್ಲಿ ಮಂಗಳೂರಿನ ಸ್ನಾತಕೋತ್ತರ ಕೇಂದ್ರಕ್ಕೆ ದೇ.ಜ.ಗೌ ಮತ್ತು ಹಾ.ಮಾ.ನಾಯಕ ಅವರ ಸಲಹೆಯಂತೆ ಉಪನ್ಯಾಸಕರಾಗಿ ಪ್ರವೇಶಿಸಿದರು. ಅಲ್ಲಿ ಪ್ರೊ. ಎಸ್.ವಿ. ಪರಮೇಶ್ವರ ಭಟ್ಟರ ಜೊತೆ ಕೆಲಸ ಮಾಡುವ ಸದಾವಕಾಶ ದೊರೆಯಿತು. ಎಸ್.ವಿ.ಪಿ. ಅವರು ಆತ್ಮೀಯತೆಯಿಂದ ಹಾಗೂ ಮಾತ್ಸಲ್ಯದಿಂದ ತಮ್ಮ ತೆಕ್ಕೆಗೆ ಗೌಡರನ್ನು ತೆಗೆದುಕೊಂಡರು. ಆಗ 'ಕನ್ನಡ ವಿಭಾಗ ಬೆಳೆಸಲು ಹಾಗೂ ತುಳು, ಕೊಂಕಣಿ ಭಾಷೆಗಳ ನಡುವೆ ಕನ್ನಡವನ್ನು ಜನಪ್ರಿಯಗೊಳಿಸಲು ದುಡಿದರು. ಕರ್ನಾಟಕ ಬ್ಯಾಂಕ್ ಅಧ್ಯಕ್ಷರಾಗಿದ್ದ ಕೆ.ಎಸ್.ಎನ್. ಅಡಿಗ, ಪ್ರೊ. ಕು.ಶಿ. ಹರಿದಾಸಭಟ್ಟ, ಏರ್ಯ ಲಕ್ಷ್ಮೀ ನಾರಾಯಣ ಆಳ್ವ, ಚಂದ್ರಶೇಖರ ಐತಾಳ ಮುಂತಾದ ಹಿರಿಯ ವಿದ್ವಾಂಸರು, ಸಾಹಿತಿಗಳು ದೊರೆತರು. ಹೊಸ ಸ್ನೇಹದಿಂದ ಬದುಕು ಇನ್ನೂ ಸತ್ವಶಾಲಿಯಾಯಿತು. ಆಗ ವಿವೇಕ ರೈ, ಮಳಲಿ ವಸಂತಕುಮಾರ್ ಮುಂತಾದವರು ಶಿಷ್ಯರು. ಇವರು ಪಾಠ ಮಾಡುವ ಕ್ರಮ ವಿದ್ಯಾರ್ಥಿಗಳಿಗೆ ತುಂಬಾ ಅಚ್ಚುಮೆಚ್ಚಾಯಿತು. ದಕ್ಷಿಣ ಕನ್ನಡದವರು ತಾವೇ ಬುದ್ಧಿವಂತರು, ಇತರರು ನಮಗಿಂತ ಕೆಳಗಿನವರು ಎಂಬ ಧೋರಣೆಯನ್ನು ಹೊಂದಿದವರು. ಅಂತಹವರಿಂದಲೇ ಮೆಚ್ಚುಗೆ ಗಳಿಸಿಕೊಂಡರು. ಎಸ್.ವಿ.ಪಿಯವರು ಹೋದೆಡೆಯಲ್ಲೆಲ್ಲಾ ಇವರನ್ನು ಕರೆದೊಯ್ದು ಇಡೀ ದಕ್ಷಿಣ ಕನ್ನಡ ಜಿಲ್ಲೆಯನ್ನು ಸುತ್ತಿಸಿದರು. ಅಲ್ಲಿನ ಯಕ್ಷಗಾನ, ತಾಳಮದ್ದಲೆ, ವೈವಿಧ್ಯಮಯವಾದ ಜನಪದ ಕಲೆ, ಹಾಡು ಮುಂತಾದವುಗಳನ್ನೆಲ್ಲಾ ಪರಿಚಯಿಸಿದರು. ನೂರಾರು

ಉಪನ್ಯಾಸಗಳನ್ನು ಮಾಡಿಸಿದರು. ಸದಾ ವಿಚಾರ ಸಂಕಿರಣ, ಕವಿಗೋಷ್ಠಿ, ಚರ್ಚಾಗೋಷ್ಠಿ, ವಿಶೇಷ ಉಪನ್ಯಾಸ, ವ್ಯಾಖ್ಯಾನ, ನಾಟಕ-ಯಕ್ಷಗಾನಗಳ ಏರ್ಪಾಟು, ಅಭಿನಂದನ ಸಭೆಗಳು, ಪುರಸ್ಕಾರ ಸಮಾರಂಭಗಳು, ಪಲಚಂವಿ ಪ್ರಕಾಶನ, ಮುಂಗಾರು ಪತ್ರಿಕೆ ಮುಂತಾದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವಂತೆ ನೋಡಿಕೊಂಡವರು ಎಸ್.ವಿ.ಪಿ.ಯವರು. ಇಲ್ಲಿದ್ದಾಗಲೆ ಕುವೆಂಪು ಬಗ್ಗೆ ವಿದ್ಯಾರ್ಥಿಗಳಿಂದಲೇ ಬರೆಸಿ 'ರಸಋಷಿ' ಎಂಬ ಗ್ರಂಥವನ್ನು ಸಂಪಾದಿಸಿದರು. ಜೊತೆಗೆ ಇನ್ನೂ ಹಲವಾರು ಕೃತಿಗಳನ್ನು ಈ ಸಂದರ್ಭದಲ್ಲಿಯೇ ಪ್ರಕಟಿಸಿದ್ದು ವಿಶೇಷ. ಇಲ್ಲಿದ್ದ ಅವಧಿಯಷ್ಟೂ ಚೇತನಪೂರ್ಣವಾದ ಜೀವಂತ ಸ್ನೇಹದ ಸ್ಮರಣೆಯ ದಿನಗಳಾಗಿದ್ದವೆಂದು ಗೌಡರು ಇಂದಿಗೂ ಸ್ಮರಿಸಿಕೊಳ್ಳುತ್ತಾರೆ.

ದಕ್ಷಿಣ ಕನ್ನಡದಲ್ಲಿ ಉಲ್ಲಸಿತರಾಗಿರುವಾಗಲೇ ಮತ್ತೆ ದೇ.ಜ.ಗೌ ಅವರ ಕೃಪೆ ಇವರ ಮೇಲೆ ಬಿತ್ತು. ಆಗ ಕೇಂದ್ರ ಮತ್ತು ರಾಜ್ಯಕ್ಕೆ ಸಂಬಂಧಿಸಿದ ಅಧಿನಿಯಮಗಳನ್ನು ಕನ್ನಡಕ್ಕೆ ಭಾಷಾಂತರಿಸಲು ಕರ್ನಾಟಕ ಸರ್ಕಾರ ಭಾಷಾಂತರ ಇಲಾಖೆಯೊಂದನ್ನು ಸೃಷ್ಟಿಸಿತು. ಈ ಭಾಷಾಂತರಗಳನ್ನು ಕಾನೂನು ಮತ್ತು ಭಾಷೆಯ ದೃಷ್ಟಿಯಿಂದ ಪರಿಶೀಲಿಸಿ ತಿದ್ದಿ ಪರಿಷ್ಕರಿಸಿ ಅಂತಿಮ ರೂಪ ನೀಡಿ ಪ್ರಕಟಿಸಲು ಕಾನೂನು ಮತ್ತು ಭಾಷಾತಜ್ಞರನ್ನು ಒಳಗೊಂಡ ರಾಜ್ಯಾಭಾಷಾ ಆಯೋಗವನ್ನು ಅಂದಿನ ಮುಖ್ಯಮಂತ್ರಿಯಾಗಿದ್ದ ಶ್ರೀ ಡಿ.ದೇವರಾಜು ಅರಸು ಅವರ ಸರ್ಕಾರ ರಚಿಸಿತು. ಈ ಆಯೋಗಕ್ಕೆ ಭಾಷಾತಜ್ಞರೂ ಉತ್ಸಾಹಶೀಲರೂ ಆದವರು ಬೇಕೆಂದು ಅಂದಿನ ಕಾನೂನು ಇಲಾಖೆಯ ಕಾರ್ಯದರ್ಶಿಗಳಾಗಿದ್ದ ಶ್ರೀ ಎನ್.ಡಿ. ವೆಂಕಟೇಶ್ ಅವರು ಪ್ರೊ.ದೇ.ಜ.ಗೌ ಅವರನ್ನು ಕೇಳಿದಾಗ ಅವರು ಸೂಚಿಸಿದ ಮೊದಲ ಹೆಸರೇ ಲಕ್ಕಪ್ಪಗೌಡರದು. ಮುಂದೆ ಈ ಆಯೋಗದ ಸದಸ್ಯರಾಗಿ ನೇಮಕಗೊಂಡರು. ಆಗ ಇವರ ವಯಸ್ಸು ೩೪ ವರ್ಷ. ಉಚ್ಚ ನ್ಯಾಯಾಲಯದ ನಿವೃತ್ತ

ನ್ಯಾಯಮೂರ್ತಿ ಶ್ರೀ ಗೋಪೀವಲ್ಲಭ ಅಯ್ಯಂಗಾರರು ಈ ಆಯೋಗದ ಅಧ್ಯಕ್ಷರು. ಮುಳಿಯ ತಿಮ್ಮಪ್ಪಯ್ಯನವರ ಮಗ ಭಾಷಾಂತರ ಇಲಾಖೆಯ ನಿರ್ದೇಶಕರಾಗಿದ್ದ ಶ್ರೀ ಎಂ. ಕೇಶವ ಭಟ್ಟರು, ಕಾನೂನು ಕಾಲೇಜಿನ ಪ್ರಿನ್ಸಿಪಾಲರು ಆಗಿದ್ದ ಪ್ರೊ. ರಂಗಯ್ಯನವರು ಸದಸ್ಯರು. ಈ ಘಟಾನುಘಟಿಗಳ ಎದುರು ಚಿಕ್ಕ ಪ್ರಾಯದವರಾದ ಇವರನ್ನು ನೋಡಿ ಅಧ್ಯಕ್ಷರ ಮುಖ ಸಪ್ಪಗಾಯಿತು. ಸಂಸ್ಕೃತ, ಹಿಂದಿ, ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳ ಅಪಾರ ಪಾಂಡಿತ್ಯಬೇಕು, ಆಳವಾದ ಲೋಕಾನುಭವ ಬೇಕು, ಹೊಸ ಹೊಸ ಪದ ನಿರ್ಮಾಣ ಕೌಶಲ ಬೇಕು. ಇದು ತಲೆನೋವಿನ ಕೆಲಸ, ಹಾಯಾಗಿ ಪಾಠಮಾಡಿಕೊಂಡು ಇದ್ದವರು ಈ ಶುಷ್ಕ ಕೆಲಸಕ್ಕೆ ಯಾಕೆ ಬಂದಿರಿ? ಎಂದರು. ಇದನ್ನು ಒಂದು ಸವಾಲಾಗಿ ಸ್ವೀಕರಿಸಿದ ಇವರು ಸತತ ಅಧ್ಯಯನದ ಮೂಲಕ ಕಾನೂನು ಪದಕೋಶ, ಸಂಸ್ಕೃತಿ ಪದಕೋಶ, ಇಂಗ್ಲಿಷ್–ಕನ್ನಡ ಪದಕೋಶ, ಕನ್ನಡ–ಕನ್ನಡ ಪದಕೋಶಗಳನ್ನು ಪಾರಾಯಣ ಮಾಡಿದರು. ಮೂಲ ಇಂಗ್ಲೀಷನ್ನು ಕನ್ನಡ ಭಾಷಾಂತರವನ್ನು ತಾಳೆನೋಡಿ ಸೂಕ್ತ ಪರ್ಯಾಯ ಪದಗಳನ್ನು ಗುರುತುಹಾಕಿಕೊಂಡು ಸಭೆಗೆ ಹೋಗುತ್ತಿದ್ದರು. ಚರ್ಚೆಯ ಕಾಲದಲ್ಲಿ ಒಂದಾದ ಮೇಲೊಂದರಂತೆ ವಿವಿಧ ಪರ್ಯಾಯ ಪದಗಳನ್ನು ಸೂಚಿಸುತ್ತಿದ್ದರು. ಇದನ್ನು ಕಂಡ ಅಧ್ಯಕ್ಷರು ಒಂದು ವಾರದೊಳಗೆ ಮೆಚ್ಚುಗೆ ಸೂಚಿಸಿದರು. ಇತರ ಸದಸ್ಯರೂ ಕೂಡ ಇವರ ಕೆಲಸದ ಬಗ್ಗೆ ಮೆಚ್ಚಿಕೊಂಡರು. ಮುಂದೆ ವೈ.ಯಂ.ಸಿ. ಶರ್ಮ, ಪ್ರೊ. ರಾ.ಯ. ಧಾರವಾಡಕರ್, ಎಸ್.ಎಸ್. ಸಂಗೊಳ್ಳಿ ಮುಂತಾದವರು ಆಯೋಗದ ಸದಸ್ಯರಾದರು. ಈ ಅವಧಿಯಲ್ಲಿ ನೂರಕ್ಕಿಂತ ಹೆಚ್ಚು ಕೇಂದ್ರ ಮತ್ತು ರಾಜ್ಯ ಅಧಿನಿಯಮಗಳನ್ನು, ಭಾರತದ ಸಂವಿಧಾನವನ್ನು ಅನುವಾದಿಸಿ ಪರಿಷ್ಕರಿಸಿ ಪ್ರಕಟಿಸಿದರು. ಕಾನೂನು ಪದಕೋಶವನ್ನು ವಿಸ್ತರಿಸಿ ಪ್ರಕಟಿಸಲಾಯಿತು. ಈ ಕಾಲಮಾನದಲ್ಲಿ ಹಿಂದಿಯನ್ನು ಬಿಟ್ಟರೆ ಕನ್ನಡದಲ್ಲೇ ಅತ್ಯಧಿಕ ಭಾಷಾಂತರಗಳಾಗಿವೆ ಎಂಬ ಹೆಗ್ಗಳಿಕೆಯನ್ನು ಆಯೋಗ ಮತ್ತು ಸರ್ಕಾರ ಪಡೆದವು.

ಎರಡು ವರ್ಷಗಳಿಗಾಗಿ ಬಂದಿದ್ದ ಇವರು ಇಲ್ಲಿ ಏಳು ವರ್ಷಗಳ ಕಾಲ ಕೆಲಸ ಮಾಡಬೇಕಾಯಿತು. ಇದಕ್ಕೆ ಕಾರಣ ಇವರಲ್ಲಿದ್ದ ಸಾಮರ್ಥ್ಯ. ಇಲ್ಲಿದ್ದ ಅವಧಿಯಲ್ಲಿ ಕೇವಲ ಆಯೋಗದ ಕೆಲಸಕ್ಕಷ್ಟೇ ಸೀಮಿತವಾಗದೆ ಹಲವಾರು ಕೃತಿಗಳನ್ನು ಬರೆದು ಪ್ರಕಟಿಸಿದರು. ವಾರ ಪತ್ರಿಕೆಗೆ 'ಗರುಡ' ಎಂಬ ಹೆಸರಿನಲ್ಲಿ ವ್ಯಕ್ತಿ ಚಿತ್ರಗಳ ಅಂಕಣ ಬರೆಯುತ್ತಿದ್ದರು. ಒಮ್ಮೆ ಡಿ.ವಿ.ಜಿಯವರ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ 'ಶ್ರೀ ರಾಮಾಯಣ ದರ್ಶನದಲ್ಲಿ ಸೋದರ ಸಂಬಂಧಗಳು' ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದಾಗ; ಡಿ.ವಿ.ಜಿಯವರು ಇವರ ಭುಜಗಳನ್ನು ಹಿಡಿದು 'ತುಂಬಾ ಸಂತೋಷವಪ್ಪ, ಪಾಂಡಿತ್ಯ ಸತ್ತುಹೋಗುತ್ತಿದೆ ಎಂದು ನಿರಾಶೆಯಾಗುತ್ತಿತ್ತು. ಇಲ್ಲ ಸಾಯುತ್ತಿಲ್ಲ, ನಿನ್ನಂಥವರಲ್ಲಿ ಜೀವಂತವಾಗಿರುವುದನ್ನು ಕಂಡು ನನಗೆ ಸಮಾಧಾನವಾಗಿದೆ' ಎಂದಾಗ ಇವರಿಗಾದ ರೋಮಾಂಚನ ಅಷ್ಟಿಷ್ಟಲ್ಲ. ಇದೇ ಸಂದರ್ಭದಲ್ಲಿ ಹಲವಾರು ಗಣ್ಯರು ಇವರಿಗೆ ಹತ್ತಿರವಾದರು. ಕನ್ನಡ ಮತ್ತು ಸಂಸ್ಕೃತ ಇಲಾಖೆಯಲ್ಲಿ ಉಪನಿರ್ದೇಶಕ ಹುದ್ದೆ ದೊರೆಯುತ್ತಿತ್ತು. ಆದರೆ ಬೋಧನೆ ಇವರ ಸೆಳೆತವಾಗಿದ್ದುದರಿಂದ ಪುನಃ ಮಂಗಳೂರಿಗೆ ಬಂದರು. ಇವರು ಆಯೋಗದ ಸದಸ್ಯರಾಗಿ ಮಾಡಿದ ಕೆಲಸದ ಬಗ್ಗೆ ಮೆಚ್ಚಿಕೊಂಡ ಹಲವು ಗಣ್ಯರಲ್ಲಿ ದೇ.ಜ.ಗೌ. ಕೂಡ ಒಬ್ಬರು. ಮಂಗಳೂರಿಗೆ ಬಂದಾಗ ಸ್ನಾತಕೋತ್ತರ ಕೇಂದ್ರ ವಿಶ್ವವಿದ್ಯಾಲಯವಾಗಿತ್ತು. ಆಗ ಕುಲಪತಿಯಾಗಿದ್ದ ಪ್ರೊ. ಬಿ. ಷೇಖ್ ಅಲಿ ಅವರು ಇವರನ್ನು ತುಂಬಾ ಪ್ರೀತಿ ಗೌರವಗಳಿಂದ ನಡೆಸಿಕೊಂಡರು.

ಆನಂತರ ಶಿವಮೊಗ್ಗ ಜಿಲ್ಲೆಯ ಬಿ.ಆರ್. ಪ್ರಾಜೆಕ್ಟ್‌ನ ಸ್ನಾತಕೋತ್ತರ ಕೇಂದ್ರಕ್ಕೆ ರೀಡರ್ ಆಗಿ ಬಂದರು. ಅಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರು, ಪ್ರಸಿದ್ಧ ಸಾಹಿತಿಗಳು, ವಿದ್ವಾಂಸರು ಆದ ಪ್ರೊ. ಎಚ್.ತಿಪ್ಪೇರುದ್ರಸ್ವಾಮಿಯವರು ಇವರನ್ನು ಆತ್ಮೀಯವಾಗಿ ಬರಮಾಡಿಕೊಂಡು ಪ್ರೋತ್ಸಾಹಿಸಿದರು. ಇಲ್ಲಿಗೆ ಬಂದ ಅನಂತರ ಕನ್ನಡ ವಿಭಾಗದ, ಸಾಹಿತ್ಯ ಸಂಘದ ಅಧ್ಯಕ್ಷರಾಗಿ ಹಲವಾರು

ಉಪನ್ಯಾಸಗಳನ್ನು ಏರ್ಪಡಿಸುವುದರೊಂದಿಗೆ "ಕನ್ನಡದ ಸಮಸ್ಯೆಗಳು" ಎಂಬ ವಿಚಾರ ಸಂಕಿರಣ ನಡೆಸಿದರು. ಆಗ ಗೋಕಾಕ್ ಚಳುವಳಿಯಲ್ಲಿ ಪ್ರೊ. ತಿಪ್ಪೇರುದ್ರಸ್ವಾಮಿಯವರೊಂದಿಗೆ ಉತ್ಸಾಹದಿಂದ ಭಾಗವಹಿಸಿ ವರದಿ ಜಾರಿಗೊಳಿಸದಂತೆ ಒತ್ತಾಯಿಸಿದರು. ಇಲ್ಲಿದ್ದ ಅವಧಿಯಲ್ಲಿ ಪಾಠ ಪ್ರವಚನಗಳ ಜೊತೆಗೆ ಕನ್ನಡ ಸಾಹಿತ್ಯ ಮತ್ತು ಜಾನಪದದ ಬೆಳವಣಿಗೆಗೆ ತಮ್ಮನ್ನು ಹೆಚ್ಚು ಹೆಚ್ಚಾಗಿ ತೊಡಗಿಸಿಕೊಂಡರು. ೧೯೮೨ರಲ್ಲಿ 'ಮಲೆನಾಡು ಜಾನಪದ', ೧೯೮೨ರಲ್ಲಿ 'ವಿಶಿಷ್ಟ ಜಾನಪದ' ಎಂಬ ವಿಚಾರ ಸಂಕಿರಣದ ಸಂಚಾಲಕರಾಗಿ ಯಶಸ್ವಿಯಾಗಿ ನಡೆಸಿದರು. ಇವರ ವೈಶಿಷ್ಟ್ಯವೆಂದರೆ ವಿಚಾರ ಸಂಕಿರಣಗಳನ್ನು ನಡೆಸುವ ಸಂದರ್ಭದಲ್ಲಿ ಜನಪದ ಕಲಾಮೇಳಗಳನ್ನು ನಡೆಸುವ ಪದ್ಧತಿಯನ್ನು ಜಾರಿಗೆ ತಂದದ್ದು. ಈ ಕಲಾಮೇಳಗಳು ಅದ್ದೂರಿಯಾಗಿ ನಡೆದವು. ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ ಜಿಲ್ಲೆಗಳಲ್ಲಿದ್ದ ಅನೇಕ ಅಜ್ಞಾತ ಜನಪದ ಕಲಾವಿದರು ಬೆಳಕಿಗೆ ಬರಲು ಸಾಧ್ಯವಾಯಿತು. ಈ ಸಂದರ್ಭದಲ್ಲಿ ಪ್ರಮುಖ ಕಲಾವಿದರಿಗೆ ಸನ್ಮಾನ ಪುರಸ್ಕಾರವು ದೊರೆತವು. ಈ ಕೇಂದ್ರ ಗ್ರಾಮೀಣ ಪರಿಸರದಲ್ಲಿದ್ದುದರಿಂದ ಸುತ್ತಮುತ್ತಲ ಗ್ರಾಮಸ್ಥರೂ ಕೂಡ ಕಲಾಮೇಳಗಳಲ್ಲಿ ಭಾಗವಹಿಸುವುದರೊಂದಿಗೆ ಈ ಕಾರ್ಯಕ್ರಮಗಳು ಹೆಚ್ಚು ಹೆಚ್ಚಾಗಿ ಜನಪ್ರಿಯವಾದವು. ಮೇಲ್ಕಂಡ ವಿಚಾರ ಸಂಕಿರಣದ ಪ್ರಬಂಧಗಳು ಅದೇ ಶೀರ್ಷಿಕೆಯಲ್ಲಿ ಪುಸ್ತಕ ರೂಪದಲ್ಲಿ ಹೊರಬಂದಿರುವುದು ಉಪಯುಕ್ತವಾಗಿದೆ. ಪ್ರೊ. ತಿಪ್ಪೇರುದ್ರಸ್ವಾಮಿಯವರ ಕಾಲದಲ್ಲಿ ಆರಂಭವಾಗಿದ್ದ 'ಜನಪದ ಕಲಾಕೂಟ' ಲಕ್ಕಪ್ಪಗೌಡರ ನೇತೃತ್ವದಲ್ಲಿ ಮುಂದೆ ಪ್ರಬುದ್ಧಮಾನವಾಗಿ ನಡೆದುಕೊಂಡು ಬಂದಿತು.

ವಿಶ್ವವಿದ್ಯಾನಿಲಯಗಳು ಕೇವಲ ದಂತಗೋಪುರಗಳಾಗಿರದೆ, ಜ್ಞಾನ ಪ್ರಸಾರ ಸಾಮಾನ್ಯರಿಗೂ ತಲುಪಬೇಕು ಎಂಬ ಉದ್ದೇಶವನ್ನಿಟ್ಟುಕೊಂಡು ಕೆಲಸ ಮಾಡಿದ ಕೇಂದ್ರ ಕನ್ನಡ ವಿಭಾಗ. ಪ್ರಸಾರಾಂಗ ಪ್ರಾರಂಭವಾಗುವವರೆಗೆ ಅದರ ಕೆಲಸವನ್ನು ಕನ್ನಡ ವಿಭಾಗ ಮಾಡಿಕೊಂಡು ಬಂದಿತು. ಇದಕ್ಕೆ

ಭದ್ರಬುನಾದಿ ಹಾಕಿದವರಲ್ಲಿ ಲಕ್ಕಪ್ಪಗೌಡರು ಒಬ್ಬರು ಪ್ರಮುಖರಾಗಿದ್ದಾರೆ. ೧೯೮೩-೮೪ರಲ್ಲಿ ಕನ್ನಡ ವಿಭಾಗದ ದಶಮಾನೋತ್ಸವದ ಸದರ್ಭದಲ್ಲಿ ನಡೆದ 'ಪಾಶ್ಚಾತ್ಯ ಮಹಾಕಾವ್ಯಗಳು' ಮತ್ತು 'ದ್ರಾವಿಡ ಜಾನಪದ' ಎಂಬ ವಿಚಾರಸಂಕಿರಣಗಳು ಯಶಸ್ವಿಯಾಗುವಲ್ಲಿ ಲಕ್ಕಪ್ಪಗೌಡರು ಶ್ರಮವಹಿಸಿದ್ದಾರೆ. ಯಾವುದೇ ಅನುಕೂಲಕರವಾದ ಸೌಲಭ್ಯವಿಲ್ಲದಿದ್ದ ಸಂದರ್ಭದಲ್ಲಿಯೂ ಕನ್ನಡ ವಿಭಾಗದ ಕಾರ್ಯಕ್ರಮಗಳು ನಡೆದು, ವಿಭಾಗ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಲಕ್ಕಪ್ಪಗೌಡರದು ಮಹತ್ವದ ಸಾಧನೆಯೇ ಆಗಿದೆ. ಪ್ರೊ. ತಿಪ್ಪೇರುದ್ರಸ್ವಾಮಿಯವರೊಂದಿಗೆ ಸೇರಿ ಸ್ನಾತಕೋತ್ತರ ಕೇಂದ್ರದ ಆವರಣದಲ್ಲಿ ಕೈಲಾಸಂ ಶತಮಾನೋತ್ಸವದ ಅಂಗವಾಗಿ ಕನ್ನಡ ವಿಭಾಗ ಮತ್ತು ಸ್ಥಳೀಯರ ಸಹಕಾರದೊಂದಿಗೆ 'ಕೈಲಾಸಂ ರಂಗಮಂದಿರ' ವನ್ನು ನಿರ್ಮಿಸಿದ್ದು ವಿಶೇಷವಾದ ಅದ್ಭುತ ಕೆಲಸವೇ ಆಗಿದೆ.

ಎಚ್.ಜೆ. ಲಕ್ಕಪ್ಪಗೌಡರು ತಿಪ್ಪೇರುದ್ರಸ್ವಾಮಿಯವರ ಅನಂತರ ೧೯೮೫ರಿಂದ ೧೯೯೫ರವರೆಗೆ (ಮಧ್ಯೆ ನಾಲ್ಕು ವರ್ಷಕುಲಸಚಿವರಾಗಿದ್ದ ಅವಧಿ ಬಿಟ್ಟು) ಕನ್ನಡ ವಿಭಾಗದ ಮುಖ್ಯಸ್ಥರಾಗಿ ಮಾಡಿದ ಸಾಧನೆ ಮಹತ್ವವಾದದ್ದು. ವಿಭಾಗ ಕೇವಲ ಬೋಧನೆಗೆ, ಸಂಶೋಧನೆಗಷ್ಟಕ್ಕೇ ಸೀಮಿತವಾಗದೆ ಒಂದು ವಿಸ್ತೃತ ಬಹುಮುಖ ಚಟುವಟಿಕೆಯ ಕೇಂದ್ರವಾಗಬೇಕೆಂಬ ಉದ್ದೇಶದಿಂದ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದಂತೆ ಮಾಡಬೇಕೆಂಬ ಉದ್ದೇಶದಿಂದ ವಿಭಾಗಕ್ಕೆ "ಕನ್ನಡ ಭಾರತಿ" ಎಂದು ನಾಮಕರಣ ಮಾಡಿದ್ದು, ಕುವೆಂಪು ವಿಶ್ವವಿದ್ಯಾನಿಲದಲ್ಲಿಯೇ ಅಧ್ಯಯನ ಕೇಂದ್ರ ಎಂದು ಸ್ಥಾನಮಾನಕ್ಕೆ ಅರ್ಹವಾಗುವಂತೆ ಮಾಡುವ ಹೆಗ್ಗಳಿಕೆಯಲ್ಲಿ ಗೌಡರ ಪಾತ್ರ ಮಹತ್ವವಾದದ್ದು. ಈ ಅವಧಿಯಲ್ಲಿ ಲಕ್ಕಪ್ಪಗೌಡರ ಅಧ್ಯಕ್ಷತೆಯಲ್ಲಿ ೧೯೮೫ರಲ್ಲಿ "ಶ್ರೀರಂಗರ ಸಾಹಿತ್ಯ", ಕರ್ನಾಟಕ ಜಾತ್ರೆಗಳು, ಜಾನಪದ ಮತ್ತು ಪೂರಕ ಕ್ಷೇತ್ರಗಳು, ೧೯೮೬ರಲ್ಲಿ ಕನ್ನಡ ಸಾಹಿತ್ಯ ಮತ್ತು ಸಮಾಜವಾದಿ ಒಲವುಗಳು, ೧೯೮೭ರಲ್ಲಿ ಕನ್ನಡ ಸಾಹಿತ್ಯ ಮತ್ತು

ಸಮಕಾಲೀನತೆ, ೧೯೮೯ರಲ್ಲಿ ನವಸಾಕ್ಷರರ ಸಾಹಿತ್ಯ ರಚನಾಕಮ್ಮಟ, ೧೯೯೦ರಲ್ಲಿ ಜಾನಪದ ಆಧುನಿಕ ಪ್ರವೃತ್ತಿಗಳು, ಬಂಡಾಯ ಸಾಹಿತ್ಯ ಚಳುವಳಿ: ಹತ್ತು ವರ್ಷ, ೧೯೯೫ರಲ್ಲಿ ಅರಣ್ಯಜಾನಪದ, ಸಾಹಿತ್ಯ ಮತ್ತು ಲಲಿತ ಕಲೆಗಳು ಎಂಬ ವಿಚಾರ ಸಂಕಿರಣಗಳು, ಹಲವಾರು ಕಮ್ಮಟಗಳು ನಡೆದು ವಿದ್ಯಾರ್ಥಿಗಳಿಗೆ, ಉಪನ್ಯಾಸಕರಿಗೆ ಹಾಗೂ ಸಾಹಿತ್ಯಾಸಕ್ತರಿಗೆ ಅನುಕೂಲವಾಗುವುದರೊಂದಿಗೆ ವಿಶ್ವವಿದ್ಯಾನಿಲಯಕ್ಕೆ ಹಾಗೂ ಕನ್ನಡ ಭಾರತಿಗೆ ಉನ್ನತ ಕೀರ್ತಿ ಬರಲು ಸಾಧ್ಯವಾಗಿದೆ. ೧೯೮೯ರಲ್ಲಿ ಪ್ರಾಧ್ಯಾಪಕರಾದರು.

ಅವರು ಸಾಹಿತ್ಯ ಮತ್ತು ಸಂಸ್ಕೃತಿ ಕಟ್ಟಿ ಬೆಳೆಸುವಲ್ಲಿ ಎಷ್ಟು ಪ್ರಮುಖ ಪಾತ್ರವಹಿಸಿದ್ದಾರೋ, ಅಷ್ಟೇ ಪ್ರಮಾಣದಲ್ಲಿ ವಿದ್ಯಾರ್ಥಿಗಳನ್ನು ಸರ್ವತೋಮುಖವಾಗಿ, ವೈಚಾರಿಕ, ವೈಜ್ಞಾನಿಕವಾಗಿ ಬೆಳೆಸುವಲ್ಲಿ ತಮ್ಮ ಸಾರ್ಥಕ ಅನುಭವವನ್ನು ಧಾರೆಎರೆದಿದ್ದಾರೆ. ಕೇವಲ ತರಗತಿಯ ಪಾಠದಿಂದ ವಿದ್ಯಾರ್ಥಿಗಳನ್ನು ಸಮರ್ಥವಾಗಿ ಬೆಳೆಸಲು ಆಗುವುದಿಲ್ಲ. ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ನಡುವೆ ನಿರಂತರವಾಗಿ ಸಂವಾದ, ಸಂಘರ್ಷಗಳು ನಡೆಯಬೇಕು. ಅಧ್ಯಾಪಕರಿಂದ ವಿದ್ಯಾರ್ಥಿಗಳು ಬೆಳೆಯುವಂತೆ, ವಿದ್ಯಾರ್ಥಿಗಳಿಂದ ಅಧ್ಯಾಪಕರೂ ಕೂಡ ಬೆಳೆಯುತ್ತಾರೆ ಎಂಬುದು ಅವರ ಅಭಿಪ್ರಾಯ. ಜೊತೆಗೆ ಅಧ್ಯಾಪಕರಾದವರೂ ಕೂಡ ಹೇಗಿರಬೇಕೆಂಬುದನ್ನು ಈ ರೀತಿ ಹೇಳುತ್ತಾರೆ: "ಅಧ್ಯಾಪಕ ತರಗತಿಗೆ ಹೋಗಬೇಕಾದರೆ ಎದೆ ಡವಗುಟ್ಟುತ್ತಿರಬೇಕು. ಏಕೆಂದರೆ ಕೇವಲ ಪುಸ್ತಕಗಳು ಅಧ್ಯಾಪಕರನ್ನು ಬೆಳೆಸುವುದಿಲ್ಲ. ವಿದ್ಯಾರ್ಥಿಗಳೂ, ಸಹೃದಯರೂ ಕೂಡ ಅಧ್ಯಾಪಕರನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಒಬ್ಬ ವಿದ್ಯಾರ್ಥಿಯ ಬುದ್ಧಿವಂತ ಪ್ರಶ್ನೆ ಸದಾ ಅಧ್ಯಾಪಕರನ್ನು ಕೆಣಕ್ತಾ, ಕಾಡ್ತಾ ಇದ್ದಾಗ ಅಧ್ಯಾಪಕ ಹೆಚ್ಚು ಹೆಚ್ಚು ಬೆಳೆಯಲು, ತಮ್ಮ ಪ್ರಬುದ್ಧತೆಯನ್ನೂ ವಿಮರ್ಶಾಶಕ್ತಿಯನ್ನೂ ಹೆಚ್ಚಿಸಿಕೊಳ್ಳಲು ಸಾಧ್ಯವಾಗುತ್ತದೆಂದು ಹೇಳುತ್ತಾರೆ. ಅವರು ತಾವೊಬ್ಬರೇ ಬೆಳೆಯದೆ ಇಡೀ ವಿಭಾಗದ ಎಲ್ಲಾ ಅಧ್ಯಾಪಕರನ್ನು, ಯುವ ವಿದ್ಯಾರ್ಥಿ

ಸಮೂಹವನ್ನು ಕಟ್ಟಿ ಬೆಳೆಸಿದ್ದಾರೆ. ಆದ ಕಾರಣ ಅವರ ವಿದ್ಯಾರ್ಥಿ ಸಮೂಹ ಕರ್ನಾಟಕಾದ್ಯಂತ ಇದ್ದು ಇಂದು ಕರ್ನಾಟಕದ ಸಾಂಸ್ಕೃತಿಕತೆಯ ಸಂದರ್ಭದಲ್ಲಿ ತಮ್ಮದೇ ಆದ ಅನನ್ಯ ಕೊಡುಗೆಯನ್ನು ಸಲ್ಲಿಸುತ್ತಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಐದು ವಿದ್ಯಾರ್ಥಿಗಳು ಎಂ.ಫಿಲ್ ಪದವಿಯನ್ನು, ಐದಕ್ಕಿಂತ ಹೆಚ್ಚು ಜನ ಪಿಎಚ್‌ಡಿ. ಪದವಿಯನ್ನು ಪಡೆದಿದ್ದಾರೆ.

ಲಕ್ಕಪ್ಪಗೌಡರು ಪ್ರಾಧ್ಯಾಪಕರು ಹಾಗೂ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕೆಲಸ ಮಾಡುತ್ತಿದ್ದಾಗಲೇ ಕುವೆಂಪು ವಿಶ್ವವಿದ್ಯಾನಿಲಯದ ಕುಲಪತಿಯವರಾದ ಡಾ.ಶಾಂತಿನಾಥ ದೇಸಾಯಿಯವರು ಅವರ ಆತ್ಮೀಯರ ಮೂಲಕ ಗೌಡರನ್ನು ವಿಶ್ವವಿದ್ಯಾನಿಲಯದ ಕುಲಸಚಿವರಾಗುವಂತೆ ಕೇಳಿಸಿದರು. ಆಗ ಗೌಡರು ತಮ್ಮ ಮಡದಿಯ ಆರೋಗ್ಯ ಸರಿಯಿಲ್ಲದ ಪ್ರಯುಕ್ತ ಆ ಹುದ್ದೆಯನ್ನು ನಿರಾಕರಿಸಿದರು. ಸ್ವಲ್ಪ ಸಮಯದ ನಂತರ ಅವರ ಮಡದಿಯ ಆರೋಗ್ಯ ಸುಧಾರಿಸಿದ್ದರಿಂದ ಪುನಃ ಒತ್ತಾಯ ಬಂದಿತು. ಆಗ ನೇರವಾಗಿ ಅವರೇ ಕುಲಪತಿಯವರನ್ನು ಕಂಡು ನಾವಿಬ್ಬರೂ ಆತ್ಮೀಯರು, ನಮ್ಮ ಸಂಬಂಧ ಹೀಗೇ ಮುಂದುವರಿಯಬೇಕಾದರೆ ನಾನು ಇದನ್ನು ಒಪ್ಪಲಾರೆ ಎಂದು ಹೇಳಿದರು. ಆದರೂ ದೇಸಾಯಿಯವರು ಅವರನ್ನು ಬಿಡದೆ ಒಪ್ಪಿಸಿದರು. ಅವರ ಒಂದು ವರ್ಷದ ಅವಧಿಯಲ್ಲಿ ಆತ್ಮಸಾಕ್ಷಿಗೆ ಅನುಗುಣವಾಗಿ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಕೆಲಸ ಮಾಡಿದರು. ದೇಸಾಯಿಯವರ ಅವಧಿ ಮುಗಿದು ಡಾ. ಗಜೇಂದ್ರ ಗಡ ಅವರು ಕುಲಪತಿಯಾಗಿ ಬಂದರು. ಆ ಸಂದರ್ಭದಲ್ಲಿ ಗೌಡರ ಹೆಸರೂ ಕೂಡ ಕುಲಪತಿ ಹುದ್ದೆಗೆ ಕೇಳಿಬಂದಿತ್ತು. ಹೊಸ ಕುಲಪತಿ ಬಂದ ದಿನವೇ ಅವರು ಕುಲಸಚಿವ ಸ್ಥಾನಕ್ಕೆ ರಾಜಿನಾಮೆ ಬರೆದು ಪತ್ರವನ್ನು ಅವರ ಮುಂದಿಟ್ಟರು. ಆದರೆ ಅವರು ಇರಲಿ ನೋಡೋಣ ಎಂದು ಹೇಳಿ ಅವರನ್ನೇ ಮುಂದುವರೆಸಿದರು. ಆಗ ಕುಲಪತಿಯವರೊಂದಿಗೆ ಸೇರಿ ಕುವೆಂಪು ವಿಶ್ವವಿದ್ಯಾನಿಲಯವೂ ಕೂಡ ಮೈಸೂರು ವಿಶ್ವವಿದ್ಯಾನಿಲಯದಂತೆ ಆಗಬೇಕೆಂದು ಶ್ರಮಿಸಿದರು. ಇದೇ ಸಂದರ್ಭದಲ್ಲಿ

ಕನ್ನಡ ವಿಭಾಗಕ್ಕೆ 'ಕನ್ನಡ ಭಾರತಿ' ಎಂದು ನಾಮಕರಣವಾಯಿತು. ಅದರ ಮುಖ್ಯಸ್ಥರಿಗೆ ನಿರ್ದೇಶಕ ಸ್ಥಾನ ದೊರೆಯಿತು. ಅಷ್ಟೇ ಅಲ್ಲದೆ ವಿಶ್ವವಿದ್ಯಾನಿಲಯವನ್ನು ಉನ್ನತ ಮಟ್ಟಕ್ಕೇರಿಸಬೇಕೆದು ಅಹರ್ನಿಶಿ ಸ್ವಚ್ಛತೆಯನ್ನು ಕಾಪಾಡಿಕೊಂಡು ದುಡಿದರು. ಎಲ್ಲರೂ ಮೆಚ್ಚುಗೆಯನ್ನೂ ಕೂಡ ವ್ಯಕ್ತಪಡಿಸಿದರು. ಎರಡನೇ ಅವಧಿಗೆ ಪುನಃ ಗಜೇಂದ್ರಗಡ ಅವರೇ ಕುಲಪತಿಯಾಗಿ ಮುಂದುವರೆದರು. ಆಗ ನಿಯಮ ಪಾಲನೆಯಲ್ಲಿ ಅಶಿಸ್ತು, ಪಕ್ಷಪಾತ, ಜಾತೀಯತೆ, ಆಡಳಿತದಲ್ಲಿ ಇತರರ ಮೂಗು ತೂರಿಸುವಿಕೆ ಜಾಸ್ತಿಯಾದವು. ಪತ್ರದ ಮೂಲಕ ಕುಲಪತಿಗಳನ್ನು ಎಚ್ಚರಿಸಿದರು. ಅದರಿಂದ ಫಲಸಿಗದಿದ್ದಾಗ ಕುಲಸಚಿವಸ್ಥಾನಕ್ಕೆ ರಾಜಿನಾಮೆ ನೀಡಿ ಹೊರಬಂದರು. ಇದು ಅವರ ಸ್ವಚ್ಛ, ಪ್ರಮಾಣಿಕ ಆಡಳಿತಕ್ಕೆ ನಿದರ್ಶನ. ಹೀಗೆ ೧೯೮೦ರಿಂದ ೧೯೮೪ರವರೆಗೆ ನಾಲ್ಕು ವರ್ಷ ಕುಲಸಚಿವರಾಗಿ ಕೆಲಸ ಮಾಡಿದ್ದು ಹೆಗ್ಗಳಿಕೆಯ ಜೊತೆಗೆ ವಿಶ್ವವಿದ್ಯಾನಿಲಯಕ್ಕೆ ಗೌರವವನ್ನು ತಂದಿತು. ಮುಂದೆ ಕನ್ನಡ ಭಾರತಿಯಲ್ಲಿ ನಿರ್ದೇಶಕರಾಗಿ ಕೆಲಸ ಮಾಡಿ ೧೯೯೧ರಲ್ಲಿ ನಿವೃತ್ತಿಯಾದರು.

ಅವರು ಕುಲಸಚಿವ ಪದವಿಯಿಂದ ಹಿಂತಿರುಗಿ ಕನ್ನಡ ವಿಭಾಗಕ್ಕೆ ಬಂದು ಕೆಲಸಮಾಡುತ್ತಿದ್ದಾಗ, ಅವರ ಜಾನಪದ ಕ್ಷೇತ್ರದ ಸಾಧನೆಯ ಮಹತ್ವವನ್ನು ಅರಿತ ಕರ್ನಾಟಕ ಸರ್ಕಾರ ಅವರನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿ ೧೯೯೬ರಲ್ಲಿ ನೇಮಿಸಿತು. ಅಧ್ಯಾಪನ ಹಾಗೂ ಆಡಳಿತದಲ್ಲಿ ಅಪಾರ ಅನುಭವವನ್ನು ಗಳಿಸಿಕೊಂಡಿದ್ದ ಅವರು ಅಕಾಡೆಮಿಯ ಅಧ್ಯಕ್ಷರಾಗಿ ಸಮರ್ಥವಾಗಿ ಕೆಲಸಮಾಡಲು ಆರಂಭಿಸಿದರು. ಜೊತೆಗೆ ಜೀಶಂಪ ಅವರ ಅವಧಿಯಲ್ಲಿ ಸದಸ್ಯರಾಗಿ ಕೆಲಸ ಮಾಡಿದ್ದು ಕೂಡ ಹೆಚ್ಚು ನೆರವಿಗೆ ಬಂದಿತು. ಹಿಂದಿನ ಅವಧಿಯಲ್ಲಿ ಅರ್ಧಕ್ಕೆ ನಿಂತುಹೋಗಿದ್ದ ಹಲವು ಕಾರ್ಯಯೋಜನೆಗಳನ್ನು ಮುಂದುವರೆಸಿದರು. ಅವರ ಅವಧಿಯಲ್ಲಿ ಎಂಬತ್ತು ಪುಸ್ತಕಗಳು ಪ್ರಕಟವಾದವು. ಆದರೆ ಅವರಿಗೆ ಪುಸ್ತಕಗಳ ಸಂಖ್ಯೆಗಿಂತ ವೈವಿಧ್ಯತೆ

ಮುಖ್ಯವಾಗಿತ್ತು. ಹೀಗಾಗಿ ಅಲನ್‌ಡಂಡಸ್ ಆದಿಯಾಗಿ ಪಾಶ್ಚಾತ್ಯ ಜಾನಪದ ಸಂಶೋಧಕರ ಪರಿಚಯ ಪುಸ್ತಕಗಳು, ಸರ್ವಜ್ಞ ಜಾನಪದ, ಕುಮಾರ ವ್ಯಾಸ ಜಾನಪದ ಮೊದಲಾದ 'ರತ್ನತ್ರಯ' ಸಂಚಿಕೆಗಳು ಪ್ರಕಟವಾದವು. ಜಾನಪದ ಅಧ್ಯಯನ ಕನ್ನಡದಲ್ಲಿ ಐವತ್ತು ವರ್ಷ ಪೂರೈಸಿದ ಅಂಗವಾಗಿ "ಸುವರ್ಣ ಜಾನಪದ" ಎಂಬ ಎರಡು ಸಂಪುಟಗಳು ಹೊರಬಂದವು. ಒಂದೇ ಸಲಕ್ಕೆ ಇಪ್ಪತ್ತೈದು ಪುಸ್ತಕಗಳನ್ನು ಬಿಡುಗಡೆ ಮಾಡಿದ್ದು ಅವರ ವಿಶಾಲ ಹೃದಯವಂತಿಕೆಗೆ ಸಾಕ್ಷಿಯಾಗಿದೆ. ಹಾಗೆಯೇ ಅವರು ಜಾನಪದದ ಬಗ್ಗೆ ತುಂಬಾ ಮಹತ್ವಾಕಾಕ್ಷೆಯನ್ನು ಹೊಂದಿದವರು. ಅದರ ಪರಿಣಾಮವಾಗಿ ಜಾನಪದ ನಿಘಂಟು, ಜಾನಪದ ವಿಶ್ವಕೋಶ, ಜಾನಪದ ವಸ್ತುಸಂಗ್ರಹಾಲಯಗಳ ಯೋಜನೆಗಳನ್ನು ಹಾಕಿಕೊಂಡರು. ಕರ್ನಾಟಕದಲ್ಲಿ ವಾಸವಾಗಿರುವ ಮೂವತ್ತೊಂದು ಬುಡಕಟ್ಟು ಜನಾಂಗಗಳ ಅಧ್ಯಯನವನ್ನೊಳಗೊಂಡ ಕ್ಷೇತ್ರಕಾರ್ಯಾಧಾರಿತ ಎರಡು ಬೃಹತ್ ಸಂಪುಟಗಳು ಪ್ರಕಟವಾದವು. ಈ ಯೋಜನೆ ಕನ್ನಡಿಗರ ನೆನಪಿನಲ್ಲಿ ಶಾಶ್ವತವಾಗಿ ಉಳಿಯುವಂತಹದ್ದಾಗಿದೆ.

೧೯೯೬ರ ಒಂದೇ ವರ್ಷದಲ್ಲಿ ಮೂರು ವರ್ಷಗಳು ಮಾಡುವಷ್ಟು ಕೆಲಸವನ್ನು ಮಾಡಿ ಮುಗಿಸಿದರು. ವಿಚಾರ ಸಂಕಿರಣಗಳು, ಕಲಾಮೇಳಗಳು, ಕಾರ್ಯಾಗಾರಗಳು, ವಿಶೇಷ ಘಟ್ಟ ಯೋಜನೆಯಡಿಯಲ್ಲಿ ನಲವತ್ತು ಕಾರ್ಯಕ್ರಮಗಳು ವಿಭಿನ್ನವಾಗಿ ನಡೆದವು. ಲಕ್ಕಪ್ಪಗೌಡರು ಯಾವುದೇ ಕಾರ್ಯಕ್ರಮ ಮಾಡಲಿ ಅದರಲ್ಲಿ ವೈವಿಧ್ಯತೆ ಇರುತ್ತಿತ್ತು. ಅದುವರೆಗೂ ಗಮನ ಹರಿಸದಿದ ಜಾನಪದ ಕ್ಷೇತ್ರಗಳಾದ ರೈತ ಜಾನಪದೀಯ ಅಧ್ಯಯನ, ಜಾನಪದ ತರಂಗಗಳು, ಜಾನಪದ ಮತ್ತು ಜಾಗತೀಕರಣ, ಜನಪದ ಮಹಾಕಾವ್ಯಗಳು, ಗೀಗೀ ಸಂಭ್ರಮ, ಮೂಡಲ ವೈಭವ, ಹೊಯ್ಸಳ ವೈಭವ, ವೀರಜಾನಪದ ಮುಂತಾದ ಕಾರ್ಯಕ್ರಮಗಳನ್ನು ಅದ್ಧೂರಿಯಾಗಿ ಮಾಡಿದ್ದಾರೆ. ಲಕ್ಕಪ್ಪಗೌಡರು ನಡೆಸುತ್ತಿದ್ದ ವಿಚಾರ ಸಂಕಿರಣಗಳು ತುಂಬಾ ಮೌಲಿಕವಾಗಿವೆ. ಮುಸ್ಲಿಂ ಜಾನಪದ ಚಾರಿತ್ರಿಕ ಮಹತ್ವವನ್ನು ಪಡೆದ ದಾಖಲೆಯೂ ಆಗಿದೆ.

ಮುಸ್ಲಿಂರ ಕಟ್ಟಡ ಶೈಲಿ, ಲೋಹಶಿಲ್ಪ, ಸಾಹಿತ್ಯ, ಸಂಗೀತಗಳನ್ನು ಕುರಿತು ಚರ್ಚಿಸಿದ ವಿಚಾರ ಸಂಕಿರಣ ಇದಾಗಿತ್ತು. ಮುಸ್ಲಿಂ ಜನಾಂಗ ಕೂಡ ಭಾರತದ ಇತರ ಜನಾಂಗಗಳಿಗಿಂತ ಪ್ರತ್ಯೇಕವಾದ ಜಾನಪದ ಸಂಪತ್ತನ್ನು ಹೊಂದಿದೆ. ಅವರ ಆಚಾರ, ಸಂಪ್ರದಾಯ, ನಂಬಿಕೆ ನಡಾವಳಿ; ಮುಸ್ಲಿಮರೇ ಸೃಷ್ಟಿಸಿದ ಜಾನಪದ, ಮುಸ್ಲಿಮರ ಬಗ್ಗೆ ಇತರರು ರಚಿಸಿದ ಜಾನಪದ ಮುಂತಾದ ಅಂಶಗಳನ್ನು ತಿಳಿಯುಲು ಈ ವಿಚಾರ ಸಂಕಿರಣದಿಂದ ತುಂಬಾ ಸಹಕಾರಿಯಾಗಿದೆ. ಕನಕಪುರದಲ್ಲಿ ನಡೆದ 'ಜಾನಪದ ಮತ್ತು ಜಾಗತಿಕ ಪರಿಕಲ್ಪನೆ', ಸಕಲೇಶಪುರದಲ್ಲಿ ನಡೆಸಿದ 'ಪರಿಸರ ಜಾನಪದ', ಬೆಂಗಳೂರಿನಲ್ಲಿ ನಡೆಸಿದ 'ಅಖಿಲ ಕರ್ನಾಟಕ ಜಾನಪದ ಸಮಾವೇಶ', 'ಫೋಕ್‌ಲೋರ್' ಪದ ಸೃಷ್ಟಿಯಾಗಿ ೧೫೦ ವರ್ಷಗಳಾಗಿದ್ದಕ್ಕೆ ಹಾಗೂ ಕನ್ನಡದಲ್ಲಿ ಈ ಪದಕ್ಕೆ ಸಂವಾದಿಯಾಗಿ 'ಜಾನಪದ' ಎಂಬ ಪದ ಸೃಷ್ಟಿಯಾಗಿ ೩೦ ವರ್ಷಗಳಾದ ಚಾರಿತ್ರಿಕ ಸಂಗತಿಯನ್ನು ಮನದಟ್ಟು ಮಾಡಲು ಹಾಗೂ ಜಾನಪದದ ಚಲನಶೀಲತೆಯನ್ನು ಗುರುತಿಸುವ ದೃಷ್ಟಿಯಿಂದ ತುಮಕೂರಿನಲ್ಲಿ 'ಫೋಕ್‌ಲೋರ್ ೧೫೦ ಮತ್ತು ಜಾನಪದ ೩೦' ಎಂಬ ವಿಚಾರ ಸಂಕಿರಣವನ್ನು ನಡೆಸಿದರು. ಇದರ ತರುವಾಯ ಮಹಿಳಾ ಜಾನಪದ, ಪ್ರಣಯ ಜಾನಪದ, ಹಾಸ್ಯ ಜಾನಪದ, ದುರಂತ ಜಾನಪದ, ಜಾಣ ಜಾನಪದ, ನೈತಿಕ ಜಾನಪದ, ಜಾನಪದ ಮತ್ತು ಸ್ವಾತಂತ್ರ್ಯ ಸಂಗ್ರಾಮ ಹೀಗೆ ಜಾನಪದ ಜಾಗೃತಿಯನ್ನು ಉಂಟು ಮಾಡುವಂತಹ ವಿಶಿಷ್ಟ ವಿಚಾರ ಸಂಕಿರಣಗಳು ನಡೆದವು. ಇವು ಅಧ್ಯಯನ ದೃಷ್ಟಿಯಿಂದ ಮಹತ್ವಪೂರ್ಣವಾದವುಗಳಾದವು.

ಯುವಕರಿಗೆ ಜನಪದ ಕಲೆಗಳನ್ನು ಕಲಿಸುವ ದೃಷ್ಟಿಯಿಂದ ಹಲವಾರು ಶಿಬಿರಗಳನ್ನು ನಡೆಸಿದರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಜಾನಪದ ರೂಪಕ ನಿರ್ಮಾಣ, ಯಕ್ಷಗಾನ ವೇಷಭೂಷಣ ತರಬೇತಿ, ಯಕ್ಷಗಾನ ಪ್ರಾತ್ಯಕ್ಷಿಕೆ, ಕಂಸಾಳೆ, ಗೀಗೀ ಪದಗಳ ತರಬೇತಿ, ದೊಡ್ಡಾಟದ ತರಬೇತಿ ಮುಂತಾದ ಶಿಬಿರ, ಕಮ್ಮಟಗಳು ನಡೆದು ಆಯಾ ಕಲೆಗಳನ್ನು ಕಲಿಯುವುದರ

ಜೊತೆಗೆ ಅವುಗಳ ಸ್ವರೂಪ ಮತ್ತು ಪರಿಚಯ, ಅವುಗಳನ್ನು ಮುಂದಿನ ಪೀಳಿಗೆಮಾರಿಗೆ ಉಳಿಸಿ ಬೆಳೆಸುವುದರ ಕಡೆಗೆ ಹೆಚ್ಚು ಗಮನಹರಿಸಲಾಯಿತು. ಹಳ್ಳಿಯ ಜಾನಪದ, ಹೋಬಳಿ ಜಾನಪದ, ತಾಲ್ಲೂಕು ಜಾನಪದ, ಜಿಲ್ಲಾ ಜಾನಪದ ಸಮಾವೇಶಗಳ ಕಲಾ ಮೇಳಗಳನ್ನು ಎಡೆಬಿಡದೆ ನಡೆಸಿದರು. ಕರ್ನಾಟಕ ಜಾನಪದ ಸಮಾವೇಶ, ರಾಜ್ಯ ದಲಿತ ಜನಪದ ಮೇಳ, ಅಖಿಲ ಭಾರತ ಜಾನಪದ ಸಮಾವೇಶ ಗಡಿನಾಡ ಕಲಾಮಹೋತ್ಸವ ಮುಂತಾದ ಬೃಹತ್ ಕಾರ್ಯಕ್ರಮಗಳು ನಡೆದವು. ಇಂತಹ ಕಾರ್ಯಕ್ರಮಗಳು ಇದೇ ಪ್ರಥಮವೆಂದು ರಾಷ್ಟ್ರಾದ್ಯಂತ ಬಂದಿದ್ದ ಜಾನಪದ ವಿದ್ವಾಂಸರು, ಕಲಾವಿದರು ಮನತುಂಬಿ ಮಾತನಾಡಿದ್ದಾರೆ.

ಲಕ್ಕಪ್ಪಗೌಡರು ಮತ್ತೊಂದು ಕನಸಿನ ಯೋಜನೆಯೆಂದರೆ ಕಣ್ಮರೆಯಾಗುತ್ತಿರುವ ಜನಪದ ಕಲೆಯನ್ನು ಸಾಕ್ಷ್ಯಚಿತ್ರದ ಮೂಲಕ ಹಿಡಿದಿಡಬೇಕೆಂಬುದು. ಅದರ ಸಲುವಾಗಿ ಡೊಳ್ಳುಮೇಳ, ಚೌಡಿಕೆ ಮೇಳ, ಜನಪದರ ಕಣ್ಣಲ್ಲಿ ಟಿಪ್ಪುಸುಲ್ತಾನ್, ಜನಪದರ ಕಣ್ಣಲ್ಲಿ ಸ್ವಾತಂತ್ರ್ಯ ಯೋಧರು, ಕಿತ್ತೂರು ಚೆನ್ನಮ್ಮ, ತೊಗಲುಗೊಂಬೆಯಾಟ ನಿರ್ಮಾಣ ಮುಂತಾದ ದೃಶ್ಯ ಕಲೆಗಳನ್ನು ದೃಶ್ಯ ಸಂಯೋಜನೆ ಮಾಡಿಸಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದ ಜನಪದ ವೀರಗೀತೆಗಳನ್ನು, ದಲಿತ ಜನಪದ ಗೀತೆಗಳನ್ನು ಧ್ವನಿ ಮುದ್ರಣ ಮಾಡಿಸಿರುವುದರ ಹಿಂದೆ ಇವರಿಗಿರುವ ಜನಪದ ಕಳಕಳಿಯನ್ನು ತೋರುತ್ತದೆ. ಈ ಸಂದರ್ಭದಲ್ಲಿ ಹೆಚ್ಚಾಗಿ ಪರಿಶಿಷ್ಟ ಜಾತಿಯ ಮತ್ತು ವರ್ಗದ ಕಲಾವಿದರನ್ನು ಬಳಕೆ ಮಾಡಿಕೊಂಡಿದ್ದು ವಿಶೇಷವೇ ಆಗಿದೆ. ಸರ್ಕಾರದಿಂದ ಮಂಜೂರಾದ 'ವಿಶೇಷ ಘಟಕ ಯೋಜನೆ' ಅಡಿಯಲ್ಲಿ ಕಮ್ಮಟ, ಕಾರ್ಯಾಗಾರ, ಶಿಬಿರಗಳು ರೂಪುಗೊಂಡವು. ಇದರ ಜೊತೆಗೆ ಜಿಲ್ಲಾ ಮಟ್ಟದ ಹಾಗೂ ರಾಜ್ಯಮಟ್ಟದ ದಲಿತ ಕಲಾ ಮಹೋತ್ಸವವನ್ನು ಪ್ರಪ್ರಥಮ ಬಾರಿಗೆ ನಡೆಸಲಾಗಿದೆ. ಇವರು ನಡೆಸಿದ ಕಾರ್ಯಕ್ರಮಗಳಲ್ಲಿ ದಲಿತ ಕಲಾವಿದರೇ ಹೆಚ್ಚಾಗಿ ಭಾಗವಹಿಸುವಂತೆ ನೋಡಿಕೊಂಡಿರುವುದು, ಅವರೊಂದಿಗೆ ಸಂವಾದ ನಡೆಸಿರುವುದು, ಅವರ

ಕಷ್ಟ ಸುಖಗಳನ್ನು ವಿಚಾರಿಸಿ ಅದಕ್ಕೆ ಸ್ಪಂದಿಸಿರುವುದು ಮಾನವೀಯತೆಯ ಸಮಾನತಾ ಭಾವದ ಪ್ರತೀಕವಾಗಿದೆ. ಸೂರಿಲ್ಲದ ಜನಪದ ಕಲಾವಿದರಿಗೆ ಅಂಬೇಡ್ಕರ್ ವಸತಿಯೋಜನೆಯಡಿಯಲ್ಲಿ ಮನೆಕೊಡಿಸುವ ಯೋಜನೆ ಹಾಕಿದರು. ಕಲಾವಿದರ ಮಾಸಾಶನವನ್ನು ೧೫೦ರೂಪಾಯಿಗಳಿಂದ ೨೫೦ ರೂಪಾಯಿಗಳಿಗೆ ಏರಿಕೆಯಾಗುವಂತೆ ಮಾಡಿದರು. ಇದು ಕಲಾವಿದರ ಬಗ್ಗೆ ಗೌಡರು ಹೊಂದಿರುವ ಕಾಳಜಿಯನ್ನು ತೋರುತ್ತದೆ.

ಜನಪದ ಕಲಾವಿದರಿಗೆ ಪ್ರಶಸ್ತಿ ಕೊಡುವುದರ ಜೊತೆಗೆ ಜಾನಪದ ವಿದ್ವಾಂಸರನ್ನು ಸನ್ಮಾನಿಸುವ ಪರಂಪರೆಗೆ ಅಡಿಗಲ್ಲನ್ನು ಹಾಕಿದವರು ಲಕ್ಕಪ್ಪಗೌಡರು. ಇದರೊಂದಿಗೆ 'ಕರ್ನಾಟಕ ಜಾನಪದ ರತ್ನ' ಎಂಬ ಹೊಸ ಯೋಜನೆಯ ಪ್ರಶಸ್ತಿಯನ್ನು ಆರಂಭಿಸಿ ಕರ್ನಾಟಕ ಜಾನಪದ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದ ಡಾ. ಜೀಶಂಪ ಅವರಿಗೆ ಮರಣೋತ್ತರವಾಗಿ ನೀಡಿದ್ದು ಪ್ರಶಂಸನೀಯವೇ ಆಗಿದೆ. ಕನ್ನಡ ಸಾಹಿತ್ಯ ಜಾನಪದದಿಂದ ಹೇಗೆ ಋಣಿಯಾಗಿದೆ ಎಂಬುದಕ್ಕೆ ಶಿಷ್ಟಸಾಹಿತ್ಯ ಮತ್ತು ಜಾನಪದ ಸಂವೇದನೆ ಮಾಲಿಕೆಯಲ್ಲಿ ಹೊರೆತಂದ ಹನ್ನೆರಡು ಪುಸ್ತಕಗಳು ಸಾಕ್ಷಿಯಾಗಿವೆ. ಜಾನಪದ ಕೈಪಿಡಿ, ಮುಸ್ಲಿಂ ತತ್ವಪದಕಾರರು, ಹಾಲುಮತ ಪುರಾಣ, ಲಂಬಾಣಿ ಒಗಟು ಲೋಕ ಮುಂತಾದ ಕೃತಿಗಳು ಮುಖ್ಯವಾದವು. ನಾಡಿನ ನಾನಾ ಮೂಲೆಯಲ್ಲಿದ್ದ ಬರಹಗಾರರಿಗೆ ಅವಕಾಶ ಕಲ್ಪಿಸಿಕೊಡುವ ಸಲುವಾಗಿ 'ಜಾನಪದ ಗಂಗೋತ್ರಿ' ಮತ್ತು 'ಜಾನಪದ ಸಮಾಚಾರ' ಎಂಬ ನಿಯತಕಾಲಿಕೆಗಳು ನಿರಂತರವಾಗಿ ಪ್ರಕಟವಾದವು. ಅಕಾಡೆಮಿಗೆ ಸಾಂಸ್ಕೃತಿಕ ನೀತಿಯನ್ನು ರೂಪಿಸಿದವರಲ್ಲಿ ಲಕ್ಕಪ್ಪಗೌಡರು ಮೊದಲಿಗರಾಗುತ್ತಾರೆ.

ಹೀಗೆ ಲಕ್ಕಪ್ಪಗೌಡರು ಜಾನಪದ ಅಕಾಡೆಮಿಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ನಡೆದ ವೈವಿಧ್ಯಮಯವಾದ ಕಾರ್ಯ ಚಟುವಟಿಕೆಗಳು ಸರ್ಕಾರ, ನಾಡಿನ ಜನಪದ ಕಲಾವಿದರು, ಜಾನಪದ ವಿದ್ವಾಂಸರು ಹಾಗೂ ಹಿರಿಯ-

ಕಿರಿಯರೆನ್ನದೆ ಎಲ್ಲರೂ ಮೆಚ್ಚುಗೆಯ ಮಹಾಪೂರವನ್ನೇ ಹರಿಸಿದರು. ಇದೆಲ್ಲವೂ ಗೌಡರಿಗೆ ಇದ್ದ ಜನಪದ ಸಂಸ್ಕೃತಿಯ ಕಳಕಳಿಯನ್ನು ಪ್ರತಿಬಿಂಬಿಸುವಂತಹದ್ದಾಗಿದೆ. ಇದೆಲ್ಲದರ ಪ್ರತಿಫಲವೇ ಮುಂದೆ ಗೌಡರು ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಲು ಮೂಲನೆಲೆಯಾಯಿತು.

೧೯೯೯ರಲ್ಲಿ ಕರ್ನಾಟಕ ಸರ್ಕಾರ ಗೌಡರನ್ನು 'ಕನ್ನಡ ಪುಸ್ತಕ ಪ್ರಾಧಿಕಾರದ' ಅಧ್ಯಕ್ಷರನ್ನಾಗಿ ನೇಮಕಮಾಡಿತು. ಈ ಕೆಲಸವನ್ನು ಉತ್ಸಾಹದಿಂದಲೇ ಪ್ರಾರಂಭಿಸಿದ ಅವರು ಏನನ್ನಾದರೂ ಹೊಸತನವನ್ನು ಸಾಧಿಸಿ ತೋರಿಸಬೇಕೆಂದು ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡರು. ಕಾಲೇಜಿನಿಂದ ಕಾಲೇಜಿಗೆ ಪುಸ್ತಕ ಯಾತ್ರೆ, ಮನೆಯಿಂದ ಮನೆಗೆ ಪುಸ್ತಕ ಪಯಣ, ಪುಸ್ತಕ ಲೋಕದ ಅಂಗಳದಲ್ಲಿ, ಕನ್ನಡ ಪುಸ್ತಕ ನಡೆದುಬಂದ ದಾರಿ, ಪುಸ್ತಕ ಸಂಸ್ಕೃತಿ: ಸಂವಾದ, ಕನ್ನಡ ಪುಸ್ತಕ ವೈವಿಧ್ಯ, ಕನ್ನಡದಲ್ಲಿ ಗಾಂಧಿಸಾಹಿತ್ಯ, ಕನ್ನಡ ಪುಸ್ತಕಗಳು ಮತ್ತು ಗ್ರಾಮೀಣ ಬದುಕು, ಕನ್ನಡದಲ್ಲಿ ವಿಜ್ಞಾನದ ಪುಸ್ತಕಗಳು, ಕನ್ನಡದಲ್ಲಿ ವಿಚಾರ ಸಾಹಿತ್ಯ, ಕನ್ನಡ ಪುಸ್ತಕಗಳು ಮತ್ತು ಮಹಿಳೆ, ಕನ್ನಡ ಪುಸ್ತಕ ಸಂವಹನ ಮಾಧ್ಯಮಗಳು, ಹೊರನಾಡಿನಲ್ಲಿ ಕನ್ನಡ ಪುಸ್ತಕಗಳು ಹೀಗೆ ಹತ್ತಾರು ವಿಚಾರ ಸಂಕಿರಣಗಳು, ಕಾರ್ಯಕ್ರಮಗಳು ನಾಡಿನಾದ್ಯಂತ ನಿರಂತರವಾಗಿ ನಡೆದವು. ಸಂಘ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳ ಸಂಯುಕ್ತಾಶ್ರಯದಲ್ಲಿ ಪುಸ್ತಕಗಳ ವಿವಿಧ ಆಯಾಮಗಳ ಬಗ್ಗೆ ಚರ್ಚೆಗಳು, ಗೋಷ್ಠಿಗಳು, ಸಂವಾದಗಳು ನಡೆದವು. ಹಾಸನ, ತುಮಕೂರು, ಬೆಳಗಾಂಗಳಲ್ಲಿ ರಾಜ್ಯ ಮಟ್ಟದ ಕನ್ನಡ ಪುಸ್ತಕ ಪ್ರದರ್ಶನ ಮತ್ತು ಮಾರಾಟಗಳು ನಡೆದವು. ದಕ್ಷಿಣ ಭಾಷೆಗಳ ಪುಸ್ತಕ ಮಹೋತ್ಸವ ಮೊತ್ತ ಮೊದಲಿಗೆ ಬೆಂಗಳೂರಿನಲ್ಲಿ ನಡೆದದ್ದು ಪುಸ್ತಕ ಸಂಸ್ಕೃತಿಯ ಬಗ್ಗೆ ಒಂದು ಹೊಸ ಎಚ್ಚರ ಹಾಗೂ ಆಂದೋಲನವನ್ನುಂಟು ಮಾಡಿತು. ಪುಸ್ತಕಗಳ ಮಾರಾಟವನ್ನು ವಿಸ್ತರಿಸುವ ದೃಷ್ಟಿಯಿಂದ ಪ್ರತಿ ಜಿಲ್ಲೆಯ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿ ಪುಸ್ತಕ ಮಾರಾಟ ಮಳಿಗೆ ತೆರೆಯುವುದು,

ಸಂಸತ್ ಸದಸ್ಯರ ನಿಧಿಯಿಂದ ಜಿಲ್ಲಾ ಕೇಂದ್ರಗಳಲ್ಲಿ ಖಾಯಂ ಮಳಿಗೆಗಳನ್ನು ನಿರ್ಮಿಸುವ 'ಗ್ರಂಥ ಸರಸ್ವತಿ' ಯೋಜನೆಯನ್ನು ಆರಂಭಿಸಿದರು.

ಕರ್ನಾಟಕಾದ್ಯಂತ ಕನ್ನಡ ಪುಸ್ತಕಗಳನ್ನು ಮಾರಾಟ ಮಾಡುವ ಮತ್ತು ಪ್ರದರ್ಶನಕ್ಕಾಗಿ 'ಪುಸ್ತಕ ಕರ್ನಾಟಕ' ಎಂಬ ಸಂಚಾರಿ ಪುಸ್ತಕವಾಹನವೊಂದನ್ನು ನಡೆಸಲು ಸಿದ್ಧತೆ ಮಾಡಿತು. ಆದರೆ ಹಣ ಹಾಗೂ ಸಿಬ್ಬಂದಿಯ ಅಭಾವದಿಂದಾಗಿ ವ್ಯಾಪಕವಾಗಿ ಮಾಡಲು ಸಾಧ್ಯವಾಗದಿದ್ದಕ್ಕಾಗಿ ಇಂದಿಗೂ ಅವರಲ್ಲಿ ಕೊರಗಿದೆ. ಸಗಟು ಖರೀದಿ ಯೋಜನೆಯಲ್ಲಿ ಒಂದು ಕೋಟಿ ರೂಪಾಯಿಯ ಪುಸ್ತಕಗಳನ್ನು ಖರೀದಿಸಿ ನಾಡಿನ ಗ್ರಂಥಾಲಯಗಳಿಗೆ ವಿತರಿಸಿದ್ದಾರೆ. ಒಂದು ಕೋಟಿ ರೂಪಾಯಿಗಳಷ್ಟು ಪುಸ್ತಕಗಳನ್ನು ಮುದ್ರಿಸಿದ್ದಾರೆ. ಇವರ ಅವಧಿಯಲ್ಲಿ ಎರಡು ನೂರಕ್ಕೂ ಹೆಚ್ಚು ಪುಸ್ತಕಗಳು ಪ್ರಕಟವಾದದ್ದು ಹೆಮ್ಮೆಯ ಸಂಗತಿ ಈ ಸಂದರ್ಭದಲ್ಲಿ ಪುಸ್ತಕ ಪ್ರಕಟಣೆಗಳು ಪುನರಾವರ್ತನೆಯಾಗಬಾರದೆಂದು ಎಲ್ಲಾ ಪ್ರಕಾಶಕರು, ಪ್ರಸಾರಾಂಗದ ನಿರ್ದೇಶಕರುಗಳೊಂದಿಗೆ ಚರ್ಚಿಸಿ ಏಕರೂಪ ಕಾರ್ಯಕ್ರಮ ತರಲು ಪ್ರಯತ್ನಿಸಿದರು. ಜಗತ್ತಿನ ಚಿಂತಕರ ಮಾಲೆ, ಜಾನಪದ ಮಾಲೆ, ಅನುವಾದ ಮಾಲೆ, ಗ್ರಾಮ ಸಂಸ್ಕೃತಿ ಮಾಲೆ, ಪ್ರೌಢಶಾಲಾ ವಿಭಾಗ ಮಾಲೆ ಎಂಬುದಾಗಿ ಹೊಸ ಸರಣಿಯ ಪುಸ್ತಕ ಪ್ರಕಟಿಸಿದರು. ಡಾ. ಶಂಬಾಜೋಷಿಯವರ ನಾಲ್ಕು ಸಾವಿರ ಪುಟಗಳ ಆರು ಸಂಪುಟಗಳನ್ನು ಹೊರತಂದು ಸುಲಭ ಬೆಲೆಗೆ ಮಾರಾಟ ಮಾಡಿದರು. ಶ್ರೀ ರಾಮಾಯಣ ದರ್ಶನಂ, ಕುಮಾರವ್ಯಾಸ ಭಾರತ, ವಚನ ಭಾರತ ಎಂಬ ಉದ್ಗ್ರಂಥಗಳನ್ನು ಜನಪ್ರಿಯ ಆವೃತ್ತಿ ಮಾಲೆಯಲ್ಲಿ ಪ್ರಕಟಿಸಿದ್ದು ಹೆಗ್ಗಳಿಕೆಯಾಗಿದೆ. ಜೊತೆಗೆ ಕನ್ನಡ ಪುಸ್ತಕ ಪ್ರಕಾಶಕರಿಗೆ ಗೌರವ ನೀಡುವ ಸಲುವಾಗಿ ಇಪ್ಪತ್ತೈದು ಸಾವಿರ ರೂಪಾಯಿಗಳ ವಾರ್ಷಿಕ ಪ್ರಕಾಶಕ ಪ್ರಶಸ್ತಿಯನ್ನು ಪ್ರಾರಂಭಿಸಿದರು. ಹೀಗೆ ವೈಶಿಷ್ಟ್ಯ ಪೂರ್ಣವಾದ ಕಾರ್ಯಕ್ರಮಗಳನ್ನು ಮಾಡುವ ಮೂಲಕ ನಾಡಿನ ಜನರ, ವಿದ್ವಾಂಸರ ಪ್ರೀತಿಗೆ ಪಾತ್ರರಾದರು.

ಲಕ್ಕಪ್ಪಗೌಡರು ೨೦೦೧ರಿಂದ ೨೦೦೪ರ ವರೆಗೆ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದರು. ಈ ಅವಧಿಯಲ್ಲಿ ಅವರು ಹಾಕಿಕೊಂಡಂತಹ ಯೋಜನೆಗಳು, ಮಾಡಿದಂತಹ ಕೆಲಸಗಳು ಜಾಗತೀಕರಣವನ್ನು ಸಮರ್ಥವಾಗಿ ಎದುರಿಸಬಲ್ಲಂತಹವುಗಳಾಗಿವೆ. ಕನ್ನಡ ನಾಡು-ನುಡಿಗೆ, ಸಂಸ್ಕೃತಿಗೆ; ನಾಡಿನ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದವುಗಳಾಗಿವೆ. ಅವರ ಪ್ರಕಾರ ಕಲೆ, ಸಾಹಿತ್ಯ, ವಿಜ್ಞಾನ, ಸಮಾಜವಿಜ್ಞಾನ, ತಂತ್ರಜ್ಞಾನ, ಮಾನವಿಕಗಳು ಇವೆಲ್ಲವೂ ಅಭಿವೃದ್ಧಿಯ ದೃಷ್ಟಿಯಲ್ಲಿರಬೇಕೇ ಹೊರತು ಅವು ಕೇವಲ ಶುಷ್ಕ ಅಧ್ಯಯನವಾಗಬಾರದು. ಸಂಸ್ಕೃತಿಯನ್ನು ಮರುಸೃಷ್ಟಿಯಿಂದ ನೋಡಬೇಕು. ವಿಶ್ವವಿದ್ಯಾನಿಲಯಗಳು ಈ ನಿಟ್ಟಿನಲ್ಲಿ ಕೆಲಸ ಮಾಡಬೇಕೆಂಬುದು ಅವರ ಅಭಿಮತ. ಇದಕ್ಕೆ ಗೌಡರಿಗೆ ಕುವೆಂಪು ಅವರೇ ಸ್ಫೂರ್ತಿ. ಈ ನಿಟ್ಟಿನಲ್ಲಿ ಪ್ರಸಾರಾಂಗವನ್ನು ಮತ್ತಷ್ಟು ಶಕ್ತಿಯುತವಾಗಿ ಬೆಳೆಸಿದರು. ಶೈಕ್ಷಣಿಕ ಹೊಸ ಕೋರ್ಸ್, ಹೊಸ ಹೊಸ ರೀತಿಯ ಸಂಶೋಧನೆ, ಪ್ರಕಟಣೆ, ಅಧ್ಯಯನ ಪೀಠ, ಅಭಿವೃದ್ಧಿ ಅಧ್ಯಯನ ಮುಂತಾದವುಗಳ ಮೂಲಕ ವಿಶ್ವವಿದ್ಯಾನಿಲಯ ಹೊಸ ದಿಕ್ಕಿನಲ್ಲಿ ಬೆಳೆಯಲು ತಮ್ಮ ಶಕ್ತಿ, ಸಾಮರ್ಥ್ಯವನ್ನು ಸಮರ್ಥವಾಗಿ ಬಳಸಿದರು.

ಕನ್ನಡ ಸಾಹಿತ್ಯ, ಜಾನಪದ ಮತ್ತು ಮಹಿಳಾ ಅಧ್ಯಯನಗಳಲ್ಲಿ ಎಂ.ಎ., ಪಿ.ಎಚ್.ಡಿ., ಎಂಬ ನಾಲ್ಕು ವರ್ಷಗಳ ಸಂಯೋಜಿತ ಮತ್ತು ಸಂಶೋಧನಾಧಾರಿತ ಸ್ನಾತಕೋತ್ತರ ಪದವಿ ತರಗತಿಗಳನ್ನು ಆರಂಭಿಸಿದರು. ಇದು ಕರ್ನಾಟಕದಲ್ಲಿಯೇ ಮೊದಲಿನ ಪ್ರಯತ್ನ. ಸಂಗೀತ ವಿಭಾಗದಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ, ದೃಶ್ಯಕಲೆಯಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ, ಶಿಲ್ಪಕಲೆಯಲ್ಲಿ ಪದವಿ, ದೂರಶಿಕ್ಷಣ ಪದ್ಧತಿ, ವಿಭಾಗಗಳ ಗ್ರಂಥಾಲಯಗಳು, ರಾಜ್ಯದ ೮೬ ಕಲಾ ಶಾಲೆಗಳಿಗೆ ವಿಶ್ವವಿದ್ಯಾಲಯದಿಂದ ಮಾನ್ಯತೆ ನೀಡಿ ಅವುಗಳ ಶೈಕ್ಷಣಿಕ ಆಡಳಿತವನ್ನು ವಹಿಸಿಕೊಂಡಿದ್ದು ಇವರು ಮಾಡಿದ ಪ್ರಮುಖ ಕೆಲಸಗಳು. ಆಡಳಿತಕನ್ನಡ, ಕ್ರಿಯಾತ್ಮಕ ಕನ್ನಡ,

ಕರಕುಶಲಕಲೆಗಳು, ಅಭಿವೃದ್ಧಿ ಸಂವಹನ, ಪ್ರವಾಸೋದ್ಯಮ ಸಂಸ್ಕೃತಿ ಮತ್ತು ಪುರಾತತ್ವ, ಪ್ರಾಚೀನ ವಿಜ್ಞಾನ, ಮಹಳಾ ಅಧ್ಯಯನ, ಭಾಷಾಂತರ ಅಧ್ಯಯನ, ಕರ್ನಾಟಕ ಅಧ್ಯಯನ, ಜನಪದ ಸಂಗೀತ, ಶಾಸನ ಶಾಸ್ತ್ರ ಅಧ್ಯಯನ, ಬುಡಕಟ್ಟು ಅಧ್ಯಯನ, ದ್ರಾವಿಡ ಅಧ್ಯಯನ, ದಲಿತ ಅಧ್ಯಯನ, ಜನಪದ ಕಲೆಗಳು, ನಾಟಕ ಕಲೆ, ಕನ್ನಡ ಸಾಹಿತ್ಯ ಎಂಬ ೧೭ ಡಿಪ್ಲೊಮಾ ಕೋರ್ಸ್‌ಗಳನ್ನು ಪ್ರಾರಂಭ ಮಾಡಿದರು. ಸಂಶೋಧನಾ ವಿಧಾನ, ತೆಲುಗು ಭಾಷೆ, ತಮಿಳು ಭಾಷೆ, ಮಲಯಾಳಂ ಭಾಷೆಯ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಆರಂಭಿಸಿದರು. ಪಠ್ಯಪುಸ್ತಕ ನಿರ್ದೇಶನಾಲಯ, ದೂರಶಿಕ್ಷಣದ ಮೂಲಕ ಕನ್ನಡ ಸಾಹಿತ್ಯ ಎಂ.ಎ., ಕನ್ನಡ ಬಿ.ಎಡ್ ಮತ್ತು ಮಾಹಿತಿ ತಂತ್ರಜ್ಞಾನ ಡಿಪ್ಲೊಮಾ ಕೋರ್ಸ್‌ಗಳನ್ನು ಕೂಡ ಆರಂಭಿಸಿದರು. ಹೊಸದಾಗಿ ವಿಜ್ಞಾನ, ಇತಿಹಾಸ ವಿಭಾಗಗಳು, ಕುಪ್ಪಳಿಯಲ್ಲಿ ರಾಷ್ಟ್ರಕವಿ ಸಂಶೋಧನಾ ಕೇಂದ್ರ, ಬೆಂಗಳೂರು, ಸಾಗರ, ಮೇಲುಕೋಟೆ ಮತ್ತು ಬೀದರ್‌ಗಳಲ್ಲಿಯೂ ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆ ನೀಡಿದರು. ವಿದ್ಯಾರಣ್ಯ ಗಣಕ ಕೇಂದ್ರ ಸ್ಥಾಪಿಸಿದರು. ಬೆಂಗಳೂರಿನಲ್ಲಿ ಪುಸ್ತಕ ಮತ್ತು ಮಾಹಿತಿ ಕೇಂದ್ರ, ಹಾಸನ ಮತ್ತು ಬೀದರ್‌ಗಳಲ್ಲಿ ಪುಸ್ತಕ ಮಾರಾಟ ಮತ್ತು ಮಾಹಿತಿ ಕೇಂದ್ರ, ಸಿರಿಗನ್ನಡ ಗ್ರಂಥಾಲಯ ಮುಂತಾದವುಗಳನ್ನು ಆರಂಭಿಸಿದರು.

ಸಮಾಜ ವಿಜ್ಞಾನ ಮತ್ತು ಶುದ್ಧ ವಿಜ್ಞಾನಗಳಲ್ಲಿ ಪಠ್ಯ ನಿರ್ಮಾಣ, ಶಾಸನ ಸಂಪುಟ, ವಿಶ್ವಕೋಶ, ಸಾಮಾನ್ಯರಿಗಾಗಿ ಕಾನೂನು ಮಾಲೆ, ಶತಮಾನ ಚಿಂತನ ಮಾಲೆ, ದ್ರಾವಿಡ ಶಾಸ್ತ್ರ, ನಿಘಂಟು, ಇಂಜಿನಿಯರಿಂಗ್ ಮತ್ತು ವೈದ್ಯಕೀಯ ವಿದ್ಯಾರ್ಥಿಗಳಿಗಾಗಿ ಕನ್ನಡ ಪಠ್ಯ ಮುಂತಾದ ೧೫೦ ಪುಸ್ತಕಗಳನ್ನು ಪ್ರಸಾರಾಂಗದ ಮೂಲಕ ಪ್ರಕಟಿಸಿದರು. ಸಾಹಿತ್ಯ, ಇತಿಹಾಸ, ಸಂಸ್ಕೃತಿ, ಜಾನಪದ, ಕಲೆ, ದಲಿತ ಚಿಂತನೆ, ಸಾಮಾಜಿಕ ಚಿಂತನೆ, ವಿಜ್ಞಾನ ಮನೋಧರ್ಮ, ಸಂಶೋಧನೆ ಮುಂತಾದ ವಿಷಯಗಳ ಬಗ್ಗೆ ವಿಚಾರ

ಸಂಕಿರಣ, ಕಮ್ಮಟ, ಸಂವಾದಗಳನ್ನು ರಾಜ್ಯಾದ್ಯಂತ ನಡೆಸಿದರು. ಜಾನಪದ ಕರ್ನಾಟಕ, ಬುಡಕಟ್ಟು ಅಧ್ಯಯನ, ಅಭಿವೃದ್ಧಿ ಅಧ್ಯಯನ, ಮಹಿಳಾ ಅಧ್ಯಯನ, ದ್ರಾವಿಡ ಅಧ್ಯಯನ, ಶಾಸನ ಅಧ್ಯಯನ, ಹಸ್ತಪ್ರತಿ ಅಧ್ಯಯನ ಎಂಬ ಸಂಶೋಧನಾ ನಿಯಮ ಕಾಲಿಕೆಗಳನ್ನು ಆರಂಭಿಸಿದರು.

ಡಾ. ಶಂಬಾ ಅಧ್ಯಯನ ಪೀಠ, ಹೈದ್ರಾಬಾದ್ ಕರ್ನಾಟಕ ಅಧ್ಯಯನ ಪೀಠ, ವಾಲ್ಮೀಕಿ ಅಧ್ಯಯನ ಪೀಠ, ಜೈನ ಸಂಸ್ಕೃತಿ ಅಧ್ಯಯನ ಪೀಠಗಳನ್ನು ಸ್ಥಾಪಿಸಿದರು. ಹಸ್ತಪ್ರತಿ ಶಾಸ್ತ್ರ ಸಮ್ಮೇಳನ, ರಾಜ್ಯ ಮಟ್ಟದ ಮಹಿಳಾ ಸಮ್ಮೇಳನ, ರಾಜ್ಯ ಮಟ್ಟದ ಎರಡು ದೇಸೀ ಸಮ್ಮೇಳನ, ಬುಡಕಟ್ಟುಗಳ ಬಗ್ಗೆ ರಾಷ್ಟ್ರೀಯ ಸಮ್ಮೇಳನಗಳನ್ನು ನಡೆಸಿರುವುದು ಅವರ ಕಾರ್ಯ ದಕ್ಷತೆಗೆ ಸಾಕ್ಷಿಯಾಗಿವೆ. ಇವಲ್ಲದೆ ರಾಷ್ಟ್ರೀಯ ಚಿತ್ರಕಲಾಶಿಬಿರ, ರಾಜ್ಯಮಟ್ಟದ ಶಿಲ್ಪಕಲಾ ಶಿಬಿರಗಳನ್ನು ಆಯೋಜಿಸಿದ್ದಾರೆ. ರಾಜ್ಯ ಮಟ್ಟದ ದಲಿತ ಸಮಾವೇಶ, ರಾಜ್ಯ ಮಟ್ಟದ ದಾಸಸಾಹಿತ್ಯ–ಸಂಸ್ಕೃತಿ ಸಮಾವೇಶ, ಸಂಶೋಧನಾ ಸಮಾವೇಶಗಳನ್ನು ಮಾಡಿದ್ದಾರೆ. ರಾಯಚೂರಿನಲ್ಲಿ ದಾಸಸಾಹಿತ್ಯ ಸಂಸ್ಕೃತಿಯ ಸಂಶೋಧನಾ ಕೇಂದ್ರ ಸ್ಥಾಪಿಸಲು ಸಿದ್ಧತೆಯನ್ನು ಮಾಡಿದ್ದರು. ಮೂರು ದಿನಗಳು ದೇವದಾಸಿ ಸಮ್ಮೇಳನ ನಡೆಸಿ ಅವರ ಸಮಸ್ಯೆ ಬಗ್ಗೆ ಚರ್ಚೆ, ಪುನರ್ ಜೀವನದ ಬಗ್ಗೆ ಚಿಂತನೆ ನಡೆಸಿದ್ದು ಒಂದು ಮಹತ್ವದ ಸಾಧನೆಯೇ ಆಗಿದೆ. ಕೆರೆ ನೀರಾವರಿ ಬಗ್ಗೆ ಸುತ್ತ ಹಳ್ಳಿಯವರನ್ನು ಕರೆಸಿ ಅವರ ಸಾಧನೆಗಳನ್ನು ಪರಿಚಯ. ಸಂವಾದಗಳ ಮೂಲಕ ನಡೆಸಿ ಕೆರೆಗಳ ಮಹತ್ವವನ್ನು ತಿಳಿಸಿದ್ದಾರೆ. ಜನಪದ ವೈದ್ಯದ ಬಗ್ಗೆ ಸಮಾವೇಶ ಮಾಡಿ ಜನಪದ ವೈದ್ಯರನ್ನು ಕರೆಸಿ ಅವರೊಂದಿಗೆ ಸಂವಾದ ಮಾಡಿದ್ದಾರೆ.

ಹೀಗೆ ಲಕ್ಕಪ್ಪಗೌಡರು ಕುಲಪತಿಗಳಾಗಿ ಕುವೆಂಪು ಪರಂಪರೆಯನ್ನು ಮುಂದುವರೆಸಿದ್ದಾರೆನ್ನಬಹುದು. ಕನ್ನಡ ವಿಶ್ವವಿದ್ಯಾಲಯ ಅವರ ಅವಧಿಯಲ್ಲಿ ಯುಜಿಸಿ ನ್ಯಾಕ್ ಸಮಿತಿಯಿಂದ ಬಿ++ ಸ್ಥಾನಮಾನ ಪಡೆದಿದ್ದು ಕೂಡ

ಅವರ ಸಾಧನೆಗೆ, ಕಾರ್ಯ ವೈಖರಿಗೆ ದೊರೆತ ಮಾನ್ಯತೆಯಾಗಿದೆ. "ಡಾ. ಎಚ್.ಜೆ. ಲಕ್ಕಪ್ಪಗೌಡರು ಕನ್ನಡ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದವರು. ಅವರ ಈ ಸ್ಥಾನ ಬಲ ಅವರನ್ನು ದೊಡ್ಡದು ಮಾಡದು. ಏಕೆಂದರೆ ವ್ಯಕ್ತಿತ್ವದಲ್ಲಿ ಅವರು ಈ ಸ್ಥಾನ ಬಲಕ್ಕಿಂತ ದೊಡ್ಡವರಿದ್ದಾರೆ. ಒಂದು ಹಿಂದುಳಿದ ವರ್ಗದಿಂದ ಮೇಲೇರಿ ಬಂದ ಒಬ್ಬ ಅಪರೂಪದ ವಿದ್ವಾಂಸ ಅವರು. ಈ ವರ್ಗಕ್ಕೆ ಸೇರಿದವರು ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯದಲ್ಲಿ ಕುಲಪತಿಗಳಾಗಿರುವುದು ಇದೇ ಮೊದಲು. ಈ ಕಾರಣದಿಂದಲೂ ಅವರನ್ನು ಅಳೆಯಬೇಕಿಲ್ಲ. ಈ ಎಲ್ಲ ಬಾಹ್ಯ ಪದವಿಗಳಿಗಿಂತ ಅವರ ಸಜ್ಜನಿಕೆ, ಶ್ರದ್ಧೆ ಮತ್ತು ನಿರಂತರ ಕ್ರಿಯಾಶೀಲತೆ ಯಾರನ್ನಾದರೂ ಮೆಚ್ಚಿಸುತ್ತದೆ. ನನ್ನಂಥವರಿಗೆ ಹತ್ತಿರದಿಂದ ನೋಡಿದಾಗ ಅವರು ಅಣ್ಣನಂತೆ ಕಾಣುತ್ತಾರೆ. ದೂರದಿಂದ ನೋಡಿದರೆ ಧರ್ಮರಾಯನಂತೆ ಕಾಣುತ್ತಾರೆ. ಕೇಡೆಣಿಸದ ಒಬ್ಬ ಕನ್ನಡಿಗ ಇದ್ದಾನೆ ಎಂದರೆ ಅದು ಎಚ್.ಜೆ. ಲಕ್ಕಪ್ಪಗೌಡರು. ಒಬ್ಬ ಸೃಜನಶೀಲ ವೈಚಾರಕನಿಗೆ ಇರುವ ಎಲ್ಲಾ ಗುಣಗಳೂ ಮುಂದಾಲೋಚನೆಗಳೂ ಲಕ್ಕಪ್ಪಗೌಡರಲ್ಲಿ ಇವೆ. ಅವರು ಸದಾ ಚಿಂತಿಸುತ್ತಾ, ಹಾಗೆ ಚಿಂತಿಸಿದ್ದನ್ನು ಕಾರ್ಯರೂಪದಲ್ಲಿ ತರಲು ಶ್ರಮಿಸುತ್ತಾ ಬಂದವರು. ಲಕ್ಕಪ್ಪಗೌಡರನ್ನು ಯಾರೂ ಒಂದು ಕಡೆ ಕೂರಿಸಲಾರರು. ಯಾಕೆಂದರೆ ಅವರು ನಿರಂತರ ಚಲನಶೀಲರು. ಕೂಗಾಡುವವರು, ಆರ್ಭಟಿಸುವವರು ಮಾತ್ರ ಕ್ರಿಯಾಶೀಲರು ಎಂದು ತಪ್ಪು ತಿಳಿದುಕೊಂಡಿರುವ ಸಮಾಜಕ್ಕೆ ಚಿಂತನೆ ಮತ್ತು ಕ್ರಿಯೆಗಳು ಲಕ್ಕಪ್ಪಗೌಡರರಲ್ಲಿ ಹೇಗೆ ಸೇರಿಹೋಗಿವೆ ಎಂಬುದನ್ನು ನೋಡಬೇಕು. ಹಲವು ಕಡೆಯಿಂದ ಹಣ ಕೂಡಿಸಿ ಕನ್ನಡ ವಿಶ್ವವಿದ್ಯಾಲಯವನ್ನು ಅವರು ಬೆಳೆಸಿದ್ದಾರೆ. ಅವರು ಇದ್ದ ಕಡೆ ಖಂಡಿತ ತಮ್ಮ ದಾಖಲೆ ಸ್ಥಾಪಿಸುತ್ತಾರೆ. ಆ ಕೆಲಸ ಕನ್ನಡ ವಿಶ್ವವಿದ್ಯಾಲಯದಲ್ಲಿ ಆಗಿದೆ" ಎಂದು ಗೌಡರ ಕೆಲಸದ ಬಗ್ಗೆ ಅವರ ವ್ಯಕ್ತಿತ್ವದ ಬಗ್ಗೆ ಡಾ.ಹಿ.ಶಿ. ರಾಮಚಂದ್ರಗೌಡ ಅವರು ಪ್ರಶಂಸನೀಯ ಮಾತುಗಳನ್ನಾಡಿದ್ದಾರೆ (ಬಹುರೂಪಿ ಹೊನ್ನಾರುಗಳ ಹಸಿರು ಸುಗ್ಗಿ ಪು.೩,೫).

ಮೇಲಿನ ಕೆಲಸಗಳಲ್ಲದೆ ಮಂಗಳೂರು ಮತ್ತು ಕುವೆಂಪು ವಿಶ್ವವಿದ್ಯಾನಿಲಯಗಳ ಶೈಕ್ಷಣಿಕ ಸಲಹೆಗಾರರಾಗಿ, ಕಲಾ ವಿಭಾಗದ ಕ್ಷೇಮ ಪಾಲಕರಾಗಿ, ಸೆನೆಟ್, ಸಿಂಡಿಕೇಟ್ ಸದಸ್ಯರಾಗಿ, ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದಾರೆ. ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಸಂಘ ಸಂಸ್ಥೆಗಳಲ್ಲಿ ದುಡಿದಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನಾಟಕ ಮತ್ತು ಜಾನಪದ ಅಕಾಡೆಮಿಯ ಸದಸ್ಯರಾಗಿ, ಕರ್ನಾಟಕ ಜಾನಪದ ಪರಿಷತ್ತಿನ ಸ್ಥಾಪಕ ಸದಸ್ಯರಾಗಿ, ಕುಪ್ಪಳ್ಳಿಯಲ್ಲಿರುವ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಕಾರ್ಯದರ್ಶಿಯಾಗಿ, ತಂಜಾವೂರಿನ ದಕ್ಷಿಣ ವಲಯದ ಸಾಂಸ್ಕೃತಿಕ ಸಂಘಕ್ಕೆ ಕರ್ನಾಟಕ ಸರ್ಕಾರದಿಂದ ಸದಸ್ಯರಾಗಿ ಮದ್ರಾಸಿನಲ್ಲಿರುವ ಏಷಿಯಾದ ಜಾನಪದ ಅಧ್ಯಯನ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಭಾರತ ಸೇವಾದಳದ ಆಡಳಿತ ಮಂಡಳಿ ಸದಸ್ಯರಾಗಿ, ದಕ್ಷಿಣ ಭಾರತ ಭಾಷೆಗಳ ಜಾನಪದ ಅಧ್ಯಯನ ಕೇಂದ್ರದ ಅಧ್ಯಕ್ಷರಾಗಿ, ಕರ್ನಾಟಕ ಗ್ರಂಥಾಲಯಗಳ ಪುಸ್ತಕ ಆಯ್ಕೆ ಸಮಿತಿಯ ಅಧ್ಯಕ್ಷ, ಸದಸ್ಯರಾಗಿ, ಹಲವಾರು ಸಂಚಿಕೆಯ ಸಂಪಾದಕ, ಸಮಿತಿ ಸದಸ್ಯರಾಗಿ ಹೀಗೆ ಹಲವಾರು ಕ್ಷೇತ್ರಗಳಲ್ಲಿ ತಮ್ಮದೇ ಆದ ಸೇವೆಯನ್ನು ಸಲ್ಲಿಸಿದ್ದಾರೆ. ಆಕಾಶವಾಣಿ ಹಾಗೂ ದೂರದರ್ಶನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

ಇವರಿಗೆ ರಾಜ್ಯ ಸರ್ಕಾರದ ದೇವರಾಜ್ ಬಹದ್ದೂರ್ ಪ್ರಶಸ್ತಿ, ಕನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ವಿಶ್ವಮಾನವ ಸಾಹಿತ್ಯ ಪ್ರಶಸ್ತಿ, ಕರ್ನಾಟಕ ಜಾನಪದ ಅಕಾಡೆಮಿ ತಜ್ಞ ಪ್ರಶಸ್ತಿ ಹಾಗೂ ಬೆಳ್ಳಿ ಹಬ್ಬದ ಪುರಸ್ಕಾರ, ಹಾಸನ ಹಾಗೂ ಶಿವಮೊಗ್ಗ ಜಿಲ್ಲೆಯ ರಾಜ್ಯೋತ್ಸವ ಪ್ರಶಸ್ತಿ, ಹಾಸನ ಜಿಲ್ಲಾ ಐದನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಹೈದರಾಬಾದಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಸಮ್ಮೇಳನದ ಸರ್ವಾಧ್ಯಕ್ಷತೆ, ಧಾರವಾಡದಲ್ಲಿ ನಡೆದ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಸರ್ವಾಧ್ಯಕ್ಷತೆ ಮುಂತಾದ ಹತ್ತು ಹಲವು ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ.

ಲಕ್ಕಪ್ಪಗೌಡರು ಸತತ ಅಧ್ಯಯನಶೀಲರು, ಹಳೆಗನ್ನಡದಿಂದ ಆಧುನಿಕ ಸಾಹಿತ್ಯದವರೆಗೆ ತಲಸ್ಪರ್ಷಿಯಾಗಿ ಅಧ್ಯಯನ ಮಾಡಿದ್ದಾರೆ. ಸಾಹಿತ್ಯ ಬೋಧನೆ, ಕೃತಿ ರಚನೆ, ವಿಮರ್ಶೆ, ವಿವೇಚನೆ, ವಿಶ್ಲೇಷಣೆಗಳಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡವರು. ಹಣಬ್ಯಾಂಕಿಂಗ್ ಕ್ಷೇತ್ರಗಳಲ್ಲಿ ಕನ್ನಡವನ್ನು ಸಮರ್ಥವಾಗಿ ಬಳಸುವ ಬಗ್ಗೆಯೂ ಶಾಸ್ತ್ರ ಸಾಹಿತ್ಯ ಸೃಷ್ಟಿಸುವ ವಿಚಾರದಲ್ಲೂ ಪರಿಣತರು. ಭಾಷಾಜ್ಞಾನ, ಶಾಸ್ತ್ರಜ್ಞಾನ, ವೈಜ್ಞಾನಿಕ ದೃಷ್ಟಿ, ಪ್ರಯೋಗಾನುಭವ, ವಿಮರ್ಶಕನಿಗೆ, ಜಿಜ್ಞಾಸುವಿಗೆ ಇರಬೇಕಾದ ವಸ್ತುನಿಷ್ಠತೆ ಇವೆಲ್ಲವೂ ಅವರಲ್ಲಿ ಮನೆಮಾಡಿವೆ. ಜಾನಪದ ಸಂಗ್ರಹ, ಸಂಪಾದನೆ, ಸಂಶೋಧನೆ, ಜಾನಪದ ಸಂಸ್ಕೃತಿ ಪ್ರಸಾರ ಎಂದರೆ ಗೌಡರಿಗೆ ಎಲ್ಲಿಲ್ಲದ ಉತ್ಸಾಹ, ಆಸಕ್ತಿ. ಇದರೊಂದಿಗೆ ಬೆರೆತು ನೆಲಮೂಲ ಸಂಸ್ಕೃತಿಯ ಬಗ್ಗೆ ಸದಾ ಚಿಂತನಾಮಗ್ನರಾಗಿರುವವರು. ಜಾಗತೀಕರಣದ ಸಂದರ್ಭದಲ್ಲಿ ಮೂಲ ಸಂಸ್ಕೃತಿಗೆ ಧಕ್ಕೆಯಾಗುತ್ತಿರುವ ಸಂದರ್ಭದಲ್ಲಿ ಒಬ್ಬ ಕ್ರಿಯಾಶೀಲ ಬರಹಗಾರ ಹೇಗೆ ಪ್ರತಿಕ್ರಿಯಿಸಬಲ್ಲ ಎಂಬುದನ್ನು ಲಕ್ಕಪ್ಪಗೌಡರ ಹಲವಾರು ಬರಹಗಳ ಮೂಲಕ ಕಾಣಲು ಸಾಧ್ಯವಿದೆ.

ಲಕ್ಕಪ್ಪಗೌಡರ ಸಾಹಿತ್ಯ ಕೃಷಿ ಇಂತಿದೆ. ಕಾವ್ಯ : ವಸಂತಗೀತ, ಊರ ಮುಂದಿನ ಬಾವಿ, ಪದ್ದು–ಹದ್ದು, ಅಕ್ಷತೆ, ಕಿರುಗೆಜ್ಜೆ, ಸೂಜಿ ಸಂಪಿಗೆ, ವಚನ ತೋರಣ, ಏಳುಹೆಜ್ಜೆ, ವಚನ ಚಂದನ, ಕುಲಪತಿಯ ಚುಟುಕುಗಳು. ಸಣ್ಣಕತೆ : ಹೊನ್ನಾರು, ಹುಲಿಯ ಹೆಜ್ಜೆ. ನಾಟಕ : ಸಿದ್ಧರಾಮ, ತಮಸ್ಸಿನಿಂದ ಜ್ಯೋತಿಗೆ, ಕಾಯಕಯೋಗಿ. ಜೀವನ ಚರಿತ್ರೆ : ದಲಿತಸೂರ್ಯ, ಸಮತೆಯಶಿಲ್ಪಿ, ವಿಶ್ವಕವಿ ಕುವೆಂಪು, ಡಾ. ಅಂಬೇಡ್ಕರ್. ಸಾಹಿತ್ಯ ವಿಮರ್ಶೆ: ಅಂತರಂಗ, ಸಂಗಮ, ಕಥಾಲೋಕನ, ಗೋಪುರದ ದೀಪಗಳು, ಅಂತರಾಳ, ಬಾಳ ದೇಗುಲದ ನೋಟಗಳು, ವಿಲೋಕನ, ಸಾಹಿತ್ಯ–ಬಹುಮುಖೀ ಚಿಂತನೆ, ಪುಸ್ತಕ ರೇಖೆಗಳು, ಕನಕ ಮುಖಗಳು. ಮಕ್ಕಳ ಸಾಹಿತ್ಯ : ಇಲಿಯಡ್,

ಒಡಿಸ್ಸಿ, ಕಾಯಕವೇ ಕೈಲಾಸ, ದೀನಬಂಧು, ಭೋಗ–ಯೋಗ, ಕಾಮನ ಬಿಲ್ಲು, ಸ್ವತಂತ್ರ ಗಾದೆಗಳು: ಇಬ್ಬನಿ. ಕೋಶ : ಅನ್ವಾರ್ಥಕೋಶ. ಪಿ.ಎಚ್.ಡಿ. ಮಹಾಪ್ರಬಂಧ : ಶ್ರೀ ರಾಮಾಯಣ ದರ್ಶನಂ ಒಂದು ವಿಮರ್ಶಾತ್ಮಕ ಅಧ್ಯಯನ. ಸಂಪಾದಿತ ಕೃತಿಗಳು : ರಸಋಷಿ, ಮಂಗಳಗಂಗೆ, ಸಾಧನೆಯ ಹಾದಿಯಲ್ಲಿ, ನಾಗಸಂಪಿಗೆ, ರಾಷ್ಟ್ರಕವಿ, ಸಿಂಗಾರ, ಗ್ರಂಥಸರಸ್ವತಿ, ಮುತ್ತು ಬಂದಿದೆ ಕೇರಿಗೆ, ಕನಕ ಭಾರತಿ, ಸ್ವಯಂ ಸೇವಕ, ಕುರುಬರು ಮತ್ತು ಉಣ್ಣೆ ನೇಕಾರರು, ಕನಕ ಕಿರಣ, ಸಂಕೃತಿ, ಜನಪ್ರಿಯ ಕನಕ ಸಂಪುಟ, ಸಹ್ಯಾದ್ರಿಸಿರಿ, ಜೀಶಂಪ ಸಂಸ್ಮರಣೆ, ಹತ್ತಿರ ಹಸಿರು, ಅಭಿಜ್ಞ. ಇಂಗ್ಲೀಷ್ ಕೃತಿಗಳು : ಲಿಂಗರಿಂಗ್ ಫ್ರಾಗ್ರೆನ್ಸ್, ಶ್ರೀಗಂಧ. ಎ ಬೊಕೆ ಆರ್ಫ ಫ್ಲವರ್ಸ್, ಪ್ರೈಸ್‌ಲೆಸ್ ಗೋಲ್ಡ್ (ಇತರರೊಡನೆ ಈ ೪ ಕೃತಿಗಳು), ಕನಕ ಭಾರತಿ. ಜಾನಪದ : ಜನಪದ ಕಥಾವಳಿ, ಒಗಟುಗಳು, ಮಲೆನಾಡು ಜಾನಪದ, ವಿಶಿಷ್ಟ ಜಾನಪದ, ಡೊಳ್ಳುಮೇಳ, ಮಲ್ಲಿಗೆ ಮೊಗ್ಗು ಸುರಿದಾವೆ ಮತ್ತು ಹೊಂಬಾಳೆ. ಲೇಖನಗಳ ಸಂಕಲನ : ಸಾಹಿತ್ಯ ಶೋಧನ. ಮುನ್ನುಡಿಗಳ ಸಂಕಲನ : ಪುಸ್ತಕ ಮಿಂಚು. ಶ್ರೀ ರಾಮಾಯಣ ದರ್ಶನಂ ಪಾತ್ರಲೋಕ. ಇದು ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಬರುವ ಪಾತ್ರಗಳ ದರ್ಶನ. ಈ ಎಪ್ಪತ್ತೊಂದು ಕೃತಿಗಳು ಪ್ರಕಟವಾಗಿವೆ. ಇವಲ್ಲದೆ ನುಡಿಬೆಡಗು (ನುಡಿಗಟ್ಟು), ಹಣತೆ (೮೦೦ ಚುಟುಕುಗಳ ಸಂಕಲನ) ಮತ್ತು ಒಂದು ಕಥಾಸಂಕಲನ ಅಚ್ಚಿಗೆ ಸಿದ್ಧವಾಗಿದ್ದು ಸಧ್ಯದಲ್ಲಿಯೇ ಮುದ್ರಣಗೊಳ್ಳಲಿವೆ. ಇವಲ್ಲದೆ ಸುಮಾರು ಅರವತ್ತು ಪುಸ್ತಕಗಳಿಗೆ ಪ್ರಧಾನ ಸಂಪಾದಕರಾಗಿದ್ದಾರೆ. ರಾಜ್ಯ ಹಾಗೂ ರಾಷ್ಟ್ರಮಟ್ಟದ ನೂರಾರು ವಿಚಾರ ಸಂಕಿರಣಗಳಲ್ಲಿ ಪ್ರಬಂಧವನ್ನು ಮಂಡಿಸಿದ್ದಾರೆ. ಐದು ನೂರಕ್ಕೂ ಹೆಚ್ಚು ಉಪನ್ಯಾಸಗಳನ್ನು ನೀಡಿದ್ದಾರೆ. ಇವರ ಶಿಷ್ಯರು, ಸ್ನೇಹಿತರು ಹಾಗೂ ಹಿರಿಯರೆಲ್ಲರೂ ಸೇರಿ "ಹೊನ್ನಾರು" ಎಂಬ ಅಭಿನಂದನಾ ಗ್ರಂಥವನ್ನು ಗೌಡರಿಗೆ ಸಮರ್ಪಿಸಿದ್ದಾರೆ.

ಎಚ್.ಜೆ. ಲಕ್ಕಪ್ಪಗೌಡರು ಜೀಶಂಪ ಅವರ ಹಾದಿಯಲ್ಲಿಯೇ ಮುಂದುವರೆದು, ಕನಾಟಕ ಜಾನಪದ ಅಧ್ಯಯನದ ಸಂದರ್ಭದಲ್ಲಿ ಜಾನಪದಕ್ಕೆ ಹೊಸ ಚಿಂತನೆಯನ್ನು ಮೂಡಿಸಿದವರು. ಜಾನಪದವನ್ನು ಸಂಗ್ರಹ, ಸಂಪಾದನೆ ಮಾಡುವಾಗ ವಿಶಾಲ ಮನೋಧರ್ಮವನ್ನು ಮೆರೆದಿದ್ದಾರೆ. ಜಾನಪದ ಮತ್ತು ಶಿಷ್ಟ ಸಾಹಿತ್ಯ ಪರಿಶೀಲನೆಯ ಸಂದರ್ಭದಲ್ಲಿ ಜನಪದ ಸಾಹಿತ್ಯವನ್ನು ಶಿಷ್ಟ ಸಾಹಿತ್ಯಕ್ಕೆ ಸಮನಾಗಿ ನಿಲ್ಲಿಸಿರುವ ಪ್ರಯತ್ನ ಮಾಡಿದ್ದಾರೆ. ಇದು ನವೋದಯ ಸಾಹಿತಿಗಳ ಮನೋಧರ್ಮವಾದರೂ ಲಕ್ಕಪ್ಪಗೌಡರದು ಮತ್ತೂ ಮುಂದುವರಿದ ಸಮಾನತಾ ಸಮಾಜದ ಧೋರಣೆಯ ಉದಾರ ಮನೋಧರ್ಮದಿಂದ ಬಂದ ಆಲೋಚನೆ. ಜನಪದ ಸ್ಥಾನದಲ್ಲಿ ನಿಂತು ತಮ್ಮದೇ ಆದ ಗಾದೆಗಳನ್ನು ಸೃಷ್ಟಿ ಮಾಡಿರುವ ಇವರು ಸಮಕಾಲೀನ ಜನಪದ –ಜಾನಪದ ಅಸ್ತಿತ್ವಕ್ಕೆ ಭದ್ರಬುನಾದಿ ಹಾಕಿದವರು. ಜನಪದ ಹಾಗೂ ಜನಪದ ಕಾಳಜಿಯನ್ನು ಹೊಂದಿದವರು. ಇವರ ಜಾನಪದ ಕೃತಿಗಳು ಸಂಖ್ಯೆಯಲ್ಲಿ ಕಡಿಮೆ ಇರಬಹುದು. ಆದರೆ ಜಾನಪದ ಸಾಧನೆಯನ್ನು ಕೇವಲ ಕೃತಿಗಳಿಂದ ಗುರುತಿಸಿದರೆ ಸಾಕಾಗುವುದಿಲ್ಲ. ಜಾನಪದ ಚಲನಶೀಲತೆ, ಭಾಷಣ, ಬರಹ ಹಾಗೂ ಇವರು ಬರೆದಿರುವ ಮುನ್ನುಡಿ, ನಡೆಸಿರುವ ವಿಚಾರ ಸಂಕಿರಣ ಮುಂತಾದವುಗಳನ್ನೆಲ್ಲ ಒಟ್ಟಾರೆಯಾಗಿ ನೋಡಿದಾಗ ಮಾತ್ರ ಇವರ ಜಾನಪದ ಸಾಧನೆಯ ಆಳ ಅಗಲವನ್ನು ಅರಿಯಲು ಸಾಧ್ಯವಾಗುತ್ತದೆ. ಇವರು ಜಾನಪದಕ್ಕೆ ಒಂದು ಪ್ರೇರಣಾಶಕ್ತಿ ಎಂಬುದನ್ನಂತು ಮರೆಯುವ ಹಾಗಿಲ್ಲ. ಏಕೆಂದರೆ ಒಬ್ಬ ವ್ಯಕ್ತಿಯ ಸತ್ವ ಹಾಗೂ ಅಂತರಂಗದಲ್ಲಿರುವ ಆಳವನ್ನು ಕೇವಲ ಒಂದು ಮಾನದಂಡದಿಂದ ಅಳೆಯುವುದು ಸೂಕ್ತವಲ್ಲ. ಅವರ ಮನೋಧರ್ಮವನ್ನು ಅರಿತಾಗ ಅದು ತನಗೆ ತಾನೇ ತಿಳಿಯುತ್ತದೆ.

ಕರ್ನಾಟಕ ಜಾನಪದ ವಿದ್ವಾಂಸರನ್ನು ಮುಖ್ಯವಾಗಿ ಮೂರು ವರ್ಗಗಳಾಗಿ ಗುರುತಿಸಬಹುದು.

೧. ದೇಶೀ ಪುನರಭಿವೃದ್ಧಿವಾದಕರು : ಇವರು ಸ್ವಾತಂತ್ರ್ಯಪೂರ್ವದಲ್ಲಿ ಕೆಲಸ ಮಾಡಿದವರು.

೨. ಪಾಶ್ಚಾತ್ಯ ಪ್ರಭಾವ ಚಿಂತಕರು : ಇವರು ಸ್ವಾತಂತ್ರ್ಯ ನಂತರದಲ್ಲಿ ಕೆಲಸ ಮಾಡಿದವರು.

೩. ಸಮಾಜವಾದಿ ಮತ್ತು ದೇಶೀ ಅನನ್ಯತೆಯ ಚಿಂತಕರು : ಇವರು ಸಮಕಾಲೀನ ಸಂದರ್ಭದಲ್ಲಿ ಚಿಂತಿಸುತ್ತಿರುವವರು.

ಡಾ. ಎಚ್.ಜೆ. ಲಕ್ಕಪ್ಪಗೌಡರು ಮೇಲಿನ ಎರಡನೇ ವರ್ಗಕ್ಕೆ ಸೇರುತ್ತಾರೆ. ಜನಪದ ಸಾಹಿತ್ಯ ಚಿಂತನೆಯಿಂದ ಜಾನಪದದ ಕಡೆಗೆ ಆಲೋಚಿಸುವಂತಹ ಶಕೆಯೊಂದು ಆರಂಭವಾಯಿತು. ಇದಕ್ಕೆ ಪ್ರೇರಣೆ ಪಾಶ್ಚಾತ್ಯ ಜಾನಪದ ಅಧ್ಯಯನ. ವಿಶ್ವವಿದ್ಯಾನಿಲಯಗಳು ಜಾನಪದದ ಅಧ್ಯಯನದ ಕಡೆ ತಮ್ಮನ್ನು ತೊಡಗಿಸಿಕೊಳ್ಳುವುದರೊಂದಿಗೆ ಈ ಚಿಂತನೆ ಪ್ರಾರಂಭವಾಯಿತು. ಅದುವರೆಗೆ ಜನಪದ ಸಾಹಿತ್ಯ ಸಂಗ್ರಹದ ಕಡೆ ಗಮನಹರಿಸುತ್ತಿದ್ದ ವಿದ್ವಾಂಸರು ಈ ಚಿಂತನೆಯಿಂದ ಜಾನಪದ ಅಧ್ಯಯನದ ಕಡೆ ಹೆಚ್ಚು ಆಸಕ್ತಿವಹಿಸಿದರು. ಅಲ್ಲಿಂದ ಮುಂದಕ್ಕೆ ಜಾನಪದದ ಸಂಶೋಧನೆಗೆ ಹೆಚ್ಚು ಒತ್ತು ನೀಡಲಾಯಿತು. ಸಂಗ್ರಹ, ಅಧ್ಯಯನದ ಜೊತೆಗೆ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಾಪನದ ಮೂಲಕ ಜಾನಪದವನ್ನು ವಿದ್ವಾಂಸರು ಬೆಳೆಸಿದರು. ಈ ರೀತಿಯ ಚಿಂತಕರಲ್ಲಿ ಲಕ್ಕಪ್ಪಗೌಡರು ಪ್ರಮುಖರಾಗುತ್ತಾರೆ.

ಗೌಡರ ಮೊದಲ ಜನಪದ ಕೃತಿ "ಜಾನಪದ ಕಥಾವಳಿ" ೧೯೭೧ರಲ್ಲಿ ಪ್ರಕಟವಾಗಿದೆ. ಜಾನಪದದ ಕೆಲಸಗಳು ತೀವ್ರಗತಿಯನ್ನು ಪಡೆದುಕೊಳ್ಳುತ್ತಿದ್ದ ಸಂದರ್ಭದಲ್ಲಿ ಈ ಕೃತಿ ಹೊರ ಬಂದಿದೆ. ಈ ಕೃತಿಯ ಅರಿಕೆಯ ಭಾಗದಲ್ಲಿ ಸಂಪಾದಕರೆ "ಜನಪದ ಸಾಹಿತ್ಯ ಸಂಗ್ರಹಣೆ, ಸಂಸ್ಕರಣ, ಪ್ರಕಾಶನ ಕೇವಲ ಬೆರಳೆಣಿಕೆಯ ವಿದ್ವಾಂಸರು ಬಹುಶಃ ಸ್ವಪ್ರೀತಿಗಾಗಿಯೇ ಕೈಗೊಂಡಿದ್ದರು. ಪ್ರೋತ್ಸಾಹದ ಅಭಾವದಿಂದ ಅದು ಮಂಕಾಗಿತ್ತು. ಈಗ ಹೊಸಗಾಳಿ

ಬೀಸತೊಡಗಿದೆ. ಹೊಸ ಬೆಳಕು ಮೂಡತೊಡಗಿದೆ. ಮಾನವ ಪ್ರವೃತ್ತಿಯ ಮಾನವ ಸಂಸ್ಕೃತಿಯು ನೈಜ ಮೂಲರೇಖೆಗಳು ಈ ಕ್ಷೇತ್ರದಲ್ಲಿ ಅಡಕವಾಗಿವೆಯೆಂಬುದನ್ನು ಪಾಶ್ಚಾತ್ಯ ವಿದ್ವಾಂಸರು ಅಧಿಕ ಶ್ರಮ ಸಂಶೋಧನೆಗಳಿಂದ, ತ್ಯಾಗಗಳಿಂದ ಬಹಳ ಹಿಂದೆಯೇ ಕಂಡುಕೊಂಡಿದ್ದನ್ನು, ತಡವಾಗಿಯಾದರೂ ನಾವು ಅರಿತದ್ದು ಸಂತೋಷದ ಸಂಗತಿ. ಈ ದಿಶೆಯಲ್ಲಿ ತಮ್ಮ ಕೃತಿ ಒಂದು ಕಿರು ಪ್ರಯತ್ನ" ಎಂದಿದ್ದಾರೆ. ಇದು ಕಿರು ಪ್ರಯತ್ನವಲ್ಲ. ಒಂದು ದೊಡ್ಡ ಸಾಧನೆಯೇ ಆಗಿದೆ.

ಇಲ್ಲಿರುವ ಕಥೆಗಳು ಹಾಸನ ಜಿಲ್ಲೆ ಹಾಗೂ ಕೆ.ಆರ್. ನಗರ ತಾಲ್ಲೂಕಿನಲ್ಲಿ ಸಂಗ್ರಹಿಸಿದವುಗಳಾಗಿವೆ. ವಸ್ತುವಿನ ದೃಷ್ಟಿಯಿಂದ ವೈವಿಧ್ಯಪೂರ್ಣವಾಗಿದ್ದು, ಜನಪದ ಕಥೆಯ ಅಧ್ಯಯನಕ್ಕೆ ಮಹತ್ವದವುಗಳಾಗಿವೆ. ಪ್ರಸಿದ್ಧ ಕಥಾಮಾದರಿಗಳಿಗೂ ಇವು ಉತ್ತಮ ನಿದರ್ಶನವಾಗಿವೆ. ಕಥೆಗಳನ್ನು ಕಿನ್ನರ ಕಥೆಗಳು, ಅತಿಮಾನುಷ ಕಥೆಗಳು ಮತ್ತು ವಿನೋದ ಕಥೆಗಳೆಂದು ವಿಭಾಗ ಮಾಡಿರುವ ಕ್ರಮ ಉತ್ತಮವಾಗಿದೆ. ಇಲ್ಲಿಯ ಹಲವು ಕಥೆಗಳು ಆಶಯಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಇತರೆಡೆಗಳಲ್ಲಿ ಪ್ರಕಟವಾಗಿವೆ. ಆದರೂ ಭಾಷೆಯಲ್ಲಿ, ನಿರೂಪಣೆಯಲ್ಲಿ, ಕಥೆಯ ಹಂದರದಲ್ಲಿ, ಘಟನೆಗಳಲ್ಲಿ ಹಾಗೂ ಪಾತ್ರ ವಿನ್ಯಾಸಗಳಲ್ಲಿ ವಿಶೇಷವಾಗಿ ವೈವಿಧ್ಯತೆ ಇರುವುದರಿಂದ ಅವುಗಳನ್ನು ಇಲ್ಲಿ ಉಳಿಸಿಕೊಂಡಿದ್ದಾರೆ. ಒಗಟುಗಳು, ಗಾದೆಗಳು ಸಂದರ್ಭಾನುಸಾರವಾಗಿ ಬಳಕೆಯಾಗಿವೆ. ಕೆಲವು ಸಂದರ್ಭಗಳಲ್ಲಿ ಹಾಸ್ಯಭರಿತತೆ ಇದ್ದು ಅರ್ಥಕ್ಕೆ ಚ್ಯುತಿ ಬರದಂತೆ ಕಥೆಗಳು ರಸಭರಿತವಾಗಿವೆ. ಭಾಷೆಯಲ್ಲಿ ಸಹಜವಾದ ಗ್ರಾಮೀಣ ಸೊಗಡಿದ್ದರೂ ವಕ್ತೃಗಳು ವಿವಿಧ ವಯೋಮಾನದವರಿರುವುದರಿಂದ ಹಾಗೂ ಬೇರೆ ಬೇರೆ ಪ್ರದೇಶಗಳಲ್ಲಿ ಸಂಗ್ರಹಿಸಿರುವುದರಿಂದ ಆಯಾ ಪರಿಸರದ ಪ್ರಭಾವ ನಿಚ್ಚಳವಾಗಿದೆ. ಕೊನೆಯಲ್ಲಿ ಮೂವತ್ತು ಪುಟಕ್ಕಿಂತಲೂ ಹೆಚ್ಚು ಅರ್ಥಕೋಶ ಕೊಟ್ಟಿರುವುದು ಗ್ರಾಮೀಣ ನೈಜ ಸ್ವಭಾವಕ್ಕೆ ಹಿಡಿದ ಕನ್ನಡಿಯಾಗಿದೆ. ಇಲ್ಲಿಯ ಕೆಲವು ಕಥೆಗಳು

ರಾಚನಿಕ ಹಾಗೂ ಸಾಂಸ್ಕೃತಿಕ ವಿಶ್ಲೇಷಣೆಗೆ ಹಾಗೂ ತೌಲನಿಕ ಅಧ್ಯಯನಕ್ಕೆ ವಸ್ತುವಾಗಿವೆ. ಅಂತರ್ಜಾತಿಯ ವಿವಾಹವಾಗುವ ಮೂಲಕ ಸಾಮಾಜಿಕ ಬದಲಾವಣೆ ತುಡಿಯುವಂತಹದ್ದು 'ಬ್ರಹ್ಮಗಂಟು' ಎಂಬ ಕಥೆಯ ಮೂಲಕ ತಿಳಿಯುತ್ತದೆ. ಚಿಕ್ಕಹೊನ್ನಿ ದೊಡ್ಡಹೊನ್ನಿ, ಸುಂಡಣ್ಣ ಕಂಡ ಕೈಲಾಸ ಕಥೆಗಳು ತೌಲನಿಕತೆಗೆ ಉತ್ತಮ ನಿದರ್ಶನಗಳಾಗುತ್ತವೆ.

"ಒಟ್ಟಿನಲ್ಲಿ 'ಜನಪದ ಕಥಾವಳಿ' ಒಂದು ಮುಖ್ಯ ಕಥಾಸಂಕಲನ. ಸಾರ್ಥಕ ಹೆಸರನ್ನು ಹೊತ್ತು ಪ್ರಸಿದ್ಧವಾಗಿರುವ ಈ ಕೃತಿ ಅನೇಕ ವೈಶಿಷ್ಟ್ಯಗಳಿಂದ ಕೂಡಿದೆ. ಆಡುಮಾತಿನ ಪ್ರಯೋಗ, ನಿರೂಪಣೆಯ ವೈಭವ, ಆಶಯಗಳ ಸಾಂದ್ರತೆ, ರಂಜನೀಯ ಅತಿಮಾನುಷತೆ ಮತ್ತು ಮಾನವ ದೌರ್ಬಲ್ಯ-ಸಂಘರ್ಷಗಳಿಂದ ಕೃತಿ ಗಮನ ಸೆಳೆಯುತ್ತದೆ. ಕಲಾತ್ಮಕ ಕಥೆಗಾರಿಕೆ ಗ್ರಂಥದ ಅಂದವನ್ನು ಹೆಚ್ಚಿಸಿದೆ. ಜನಪದ ಕಥೆಗಳ ವಿಶ್ಲೇಷಣಾತ್ಮಕ ಅಧ್ಯಯನಕ್ಕೆ ಉಪಯುಕ್ತವೂ ಉಪಾಧೇಯವೂ ಆದ ಸಾಮಗ್ರಿಯನ್ನು ಒದಗಿಸುವುದರಲ್ಲಿ ಸಂದೇಹವಿಲ್ಲ. ಕನ್ನಡ ಜನಪದ ಕಥೆಗಳ ಸಂಗ್ರಹ ಮತ್ತು ಸಂಪಾದನೆಯ ಇತಿಹಾಸದಲ್ಲಿ ಇದಕ್ಕೊಂದು ಗಟ್ಟಿಯಾದ ಸ್ಥಾನವಿದೆ ಎಂಬುದು ನಿಜ. ನಿರಂಜನರು ಹೇಳುವ ಹಾಗೆ ಈ ಗ್ರಂಥ ಕನ್ನಡ ಜನಪದ ಸಾಹಿತ್ಯಕ್ಕೆ ಬೆಲೆಬಾಳುವ ಕೊಡುಗೆಯಾಗಿದೆ" ಎಂಬ ರಾ.ಗೌ. ಅವರ ಮಾತುಗಳು ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ. (ಹೊನ್ನಾರು ಪು.೧೭೦).

ಲಕ್ಕಪ್ಪಗೌಡರ ಮತ್ತೊಂದು ಜಾನಪದ ಕೃತಿ "ಒಗಟುಗಳು". ಇದು ೧೯೭೩ರಲ್ಲಿ ಪ್ರಕಟವಾಗಿದೆ. ಒಂದೂವರೆ ಸಾವಿರ ಒಗಟುಗಳನ್ನು ಸಂಗ್ರಹಿಸಿದ್ದು, ಅವುಗಳು ಪುನರಾವರ್ತನೆಯಾಗಬಾರದೆಂದು ೧೦೮೮ ಒಗಟುಗಳನ್ನು ಪ್ರಕಟಿಸಿದ್ದಾರೆ. ಜನಪದ ಸಾಹಿತ್ಯದ ಸಂದರ್ಭದಲ್ಲಿ ಒಗಟಿನ ಬಗ್ಗೆ ಪ್ರಕಟಣೆ ಮತ್ತು ವಿಶ್ಲೇಷಣೆ ಆಗಿರುವುದು ತುಂಬಾ ಕಡಿಮೆಯೇ. ಇದಕ್ಕೆ ಈ ಕ್ಷೇತ್ರದ ಬಗ್ಗೆ ಕಡಿಮೆ ಆಸಕ್ತಿ ಇರುವುದೇ ಆಗಿದೆ. ಇಲ್ಲಿರುವ

ಒಗಟುಗಳನ್ನು ಅರಕಲಗೂಡು, ಕೆ.ಆರ್.ನಗರ, ಹೊಳೆನರಸೀಪುರ, ಚಾಮರಾಜನಗರ, ಸಕಲೇಶಪುರ, ಚನ್ನರಾಯಪಟ್ಟಣ, ಕನಕಪುರ, ತೀರ್ಥಹಳ್ಳಿ ಮುಂತಾದ ತಾಲ್ಲೂಕುಗಳಿಂದ ಸಂಗ್ರಹಿಸಲಾಗಿದೆ. ಕೃತಿಯ ಕೊನೆಯಲ್ಲಿ ಎಲ್ಲಾ ಒಗಟುಗಳಿಗೂ ಉತ್ತರ ನೀಡಿರುವುದು ಉಪಯುಕ್ತವಾಗಿದೆ.

ಇಲ್ಲಿ ಒಗಟುಗಳನ್ನು ಪರಿವಿಡಿಯಲ್ಲಿ ವಿಭಾಗ ಮಾಡಿಲ್ಲ. ಆದರೆ ಉತ್ತಮವಾದ ಪ್ರಸ್ತಾವನೆಯನ್ನು ಬರೆದಿದ್ದು ಯಾವ ಯಾವ ಪ್ರಕಾರವಾಗಿ ವಿಂಗಡಿಸಬಹುದು ಎಂಬುದನ್ನು ಹೇಳಿದ್ದಾರೆ. ಪ್ರಾಕೃತಿಕತೆ, ನಾಟಕೀಯತೆ, ಕೌಟುಂಬಿಕ ಸಂಬಂಧಗಳು, ಜನಪದ ಆಟಗಳು ಮುಂತಾದ ರೀತಿಯ ಒಗಟುಗಳಿರುವುದನ್ನು ಹೇಳಿದ್ದಾರೆ. ಜೊತೆಗೆ ಒಗಟುಗಳ ಸ್ವರೂಪ, ಸ್ವಭಾವ ಕುರಿತು ಪ್ರಸ್ತಾಪಿಸುವುದರೊಂದಿಗೆ ಒಗಟುಗಳ ತಂತ್ರ; ನಾಟಕೀಯಗುಣ, ಹಾಸ್ಯ, ಸಾಂಕೇತಿಕತೆ, ವಸ್ತು ವೈವಿಧ್ಯತೆ, ಕಲಾತ್ಮಕತೆ ಮುಂತಾದ ಅಂಶಗಳನ್ನು ಚರ್ಚಿಸಿದ್ದಾರೆ. ಕೆಲವು ಒಗಟುಗಳನ್ನು ವಿಶ್ಲೇಷಿಸಿದ್ದಾರೆ. ಇಲ್ಲಿ ಜನಪದರ ಸೂಕ್ಷ್ಮ ಬುದ್ಧಿಯನ್ನು ಪರೀಕ್ಷಿಸುವಂತೆ ಗಣಿತದ ಒಗಟು; ಸೊಳ್ಳೆ, ತಿಗಣೆ, ಕೂರೆ ಮುಂತಾದ ಜೀವಿಗಳನ್ನು ಇಟ್ಟುಕೊಂಡು ಅಭಿವ್ಯಕ್ತಿಸುವ ವ್ಯಂಗ್ಯದ ಒಗಟುಗಳು ಇವೆ. ಒಂದೇ ಅರ್ಥವನ್ನು ಕೊಡುವಂತಹ ಒಗಟುಗಳೂ ಇದ್ದು ಅವುಗಳಲ್ಲಿ ವೈವಿಧ್ಯತೆಗಳಿರುವುದನ್ನು ಕಾಣಬಹುದು. ಅಕಾರಾದಿ ಪಟ್ಟಿಯಲ್ಲಿ ಒಗಟುಗಳನ್ನು ಜೋಡಿಸಿರುವ ಕ್ರಮ ಶಾಸ್ತ್ರೀಯ ಚೌಕಟ್ಟಿಗೆ ಕೃತಿ ಒಳಗೊಂಡಿರುವುದನ್ನು ತಿಳಿಸುತ್ತದೆ.

ಸಂಪಾದಕರೆ ಹೇಳಿರುವಂತೆ ಆಯ್ದ ಒಗಟುಗಳನ್ನು ಪ್ರಕಟಿಸಿದ್ದರೂ ಪಾಠಾಂತರವಿರುವವನ್ನು ಉಳಿಸಿಕೊಂಡಿರುವುದು, ಅವುಗಳ ಭಿನ್ನತೆಗಳನ್ನು ತಿಳಿಸಿರುವುದು ಅಧ್ಯಯನಕಾರರಿಗೆ ಅನುಕೂಲವಾಗಿದೆ. ವಿವಿಧ ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿ ಸಂಗ್ರಹಿಸಿರುವ ಒಗಟುಗಳು ಇಲ್ಲಿರುವುದರಿಂದ ಭಾಷಾ ವೈವಿಧ್ಯತೆಯನ್ನು ಗುರುತಿಸಬಹುದು. ಸಾಹಿತ್ಯದ ದೃಷ್ಟಿಯಿಂದ ತುಂಬಾ

ಸ್ವಾರಸ್ಯವಾಗಿವೆ. ಪ್ರಾಸಬದ್ಧತೆ ಇದ್ದು ಕೆಲವು ಎರಡು ಸಾಲುಗಳನ್ನು ಹೊಂದಿದ್ದರೆ ಮತ್ತೆ ಕೆಲವು ಹಲವು ಸಾಲುಗಳನ್ನು ಹೊಂದಿದ್ದು ಕಾವ್ಯಾತ್ಮಕ ಅಭಿವ್ಯಕ್ತಿಯನ್ನು ನೀಡುತ್ತವೆ. ಇನ್ನು ಕೆಲವು ಒಗಟುಗಳಲ್ಲಿ ರೂಪಕಗಳು ಇವೆ. ಆಧುನಿಕತೆಗೆ ಎಡೆಮಾಡುವಂತಹ ಸಂಭಾಷಣಾ ಚಾತುರ್ಯದ ಒಗಟುಗಳೂ ಕೂಡ ಇವೆ. ಒಗಟು ಒಡಚುವವರ ಕಲಾತ್ಮಕವಾದ ಕಲ್ಪನಾಶಕ್ತಿ, ಚಮತ್ಕಾರಗಳು ಒಗಟುಗಳ ಸ್ವಾರಸ್ಯವನ್ನು ಹೆಚ್ಚಿಸಿ ಕೃತಿಗೆ ಮೆರಗು ನೀಡಿವೆ. ಒಟ್ಟಾರೆ ಈ ಕೃತಿ ಜಾನಪದ ಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆಯಾಗಿದೆ.

"ಹೊಂಬಾಳೆ" ಎಂಬುದು ಜಾನಪದ ಲೇಖನವನ್ನೊಳಗೊಂಡ ಕೃತಿ. ಇದರಲ್ಲಿ ಹತ್ತು ಲೇಖನಗಳಿದ್ದು ವಸ್ತು ವೈವಿಧ್ಯತೆಯಿಂದ ಕೂಡಿವೆ. ಈ ಕೃತಿ ೧೯೯೫ರಲ್ಲಿ ಪ್ರಕಟವಾಗಿದೆ. 'ಕನ್ನಡ ನಾಡು ನುಡಿ ಜನತೆ' ಎಂಬ ಲೇಖನದಲ್ಲಿ ಕನ್ನಡ ನಾಡಿನ ವೈವಿಧ್ಯತೆ, ವೈಶಿಷ್ಟ್ಯತೆ, ಐತಿಹಾಸಿಕ, ಸಾಂಸ್ಕೃತಿಕ ಪರಂಪರೆಯ ಹಿರಿಮೆ ಹಾಗೂ ನುಡಿಯ ಜಾನಪದೀಯ ಸಾಂಸ್ಕೃತಿಕ ಪರಿಚಯ, ಈ ನಾಡಿನ ಜನರ ಗುಣ, ವ್ಯಕ್ತಿತ್ವಗಳನ್ನು ವಿವರವಾಗಿ ತಿಳಿಸಿದ್ದಾರೆ. 'ಜನಪದ ಕಲೆಗಳ ಅಳಿವು-ಕಾರಣ ಮತ್ತು ಪರಿಣಾಮ' ಎಂಬುದರಲ್ಲಿ ಜನಪದ ಕಲೆಗಳು ದುಸ್ಥಿತಿಯಲ್ಲಿದ್ದು ಅಳಿಯುತ್ತಿರುವುದಕ್ಕೆ ಕಾರಣಗಳನ್ನು ಹೀಗೆ ಹೇಳುತ್ತಾರೆ.

೧. ಜೀವನಸಮಸ್ಯೆಯೇ ದುರ್ಬರವಾಗಿದ್ದು, ಕಲೆಗಳನ್ನು ಪ್ರೋತ್ಸಾಹಿಸದೆ ಇರುವುದು.

೨. ಜನಪದ ಕಲೆಗಾರರಿಗೆ ಸ್ಥಾನ ಮಾನಗಳು ದೊರಕದೆ ಇರುವುದು.

೩. ಆಧುನಿಕ ಮನರಂಜನೆಗಳು ಸುಲಭವಾಗಿ ದೊರಕುತ್ತಿರುವುದು.

೪. ಜನಪದ ಕಲೆಗಳು ಅನಾಗರಿಕ ಮತ್ತು ಅಸಂಸ್ಕೃತವೆಂಬ ಕೀಳುಭಾವನೆ ಇರುವುದು:

೫. ಆಧುನಿಕ ಕೃಷಿಯಂತ್ರಗಳು ಹಾಗೂ ಹಿಟ್ಟಿನ ಗಿರಣಿ ಬಂದಿರುವುದು.

ಜನಪದ ಕಲೆಗಳನ್ನು ಉಳಿಸಲು ನೀಡಿರುವ ಸಲಹೆಗಳು :

೧. ಜನಪದ ಕಲೆಗಳನ್ನು ಸಾರ್ವತ್ರಿಕ ಸ್ವತ್ತಾಗಿ ಪರಿವರ್ತಿಸಬೇಕು.

೨. ಜನಪದ ಕಲೆಗಳನ್ನು ಭಾವುಕ ಆವೇಶದಿಂದ ನೋಡದೆ ಸುಧಾರಣೆಗೆ ಪ್ರಯತ್ನಿಸುವುದು.

೩. ಮಠಾಧೀಶರು, ರಾಜಕಾರಣಿಗಳ ಮೆರವಣಿಗೆಗೆ ಕಲಾವಿದರನ್ನು, ಕಲೆಗಳನ್ನು ಬಳಸಿ ಅವುಗಳನ್ನು ಅಗ್ಗಗೊಳಿಸಬಾರದು.

೪. ಜನಪದ ಕಲೆಗಳಿಗೆ ಸಂಬಂಧಿಸಿದ ವೇಷಭೂಷಣ, ವಾದ್ಯ ಪರಿಕರಗಳನ್ನು ತಯಾರಿಸುವ ಕಾರ್ಯಾಗಾರಬೇಕು.

೫. ಜನಪದ ಸಾಹಿತ್ಯ ಮತ್ತು ಕಲೆಗಳ ಬೋಧನೆಯ ಒಂದು ಪತ್ರಿಕೆಯನ್ನು ಕಡ್ಡಾಯಗೊಳಿಸಬೇಕು.

ಇದು ನೆಲಮೂಲ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕೆಂಬುದರ ಕಳಕಳಿಯಾಗಿದೆ.

'ವಸತಿ ಜಾನಪದ- ಕೆಲವು ಚಿಂತನೆಗಳು' ಎಂಬ ಲೇಖನದಲ್ಲಿ ಕ್ರಿಮಿ, ಕೀಟ, ಜಲಚರಗಳು, ಪಕ್ಷಿ, ಪ್ರಾಣಿ, ಮಾನವ, ಮೃತಾತ್ಮರು, ಭೂತ, ದೈವ ಎಲ್ಲರಿಗೂ ವಸತಿ ಅವಶ್ಯಕ ಎಂಬುದು ವಿಶಿಷ್ಟವಾದ ಜಾನಪದವೇ ಆಗಿದೆ. ಸತ್ತಮೇಲೆ ಆತ್ಮಕ್ಕೂ ಒಂದು ವಸತಿ ಬೇಕೆಂಬುದು ಅದ್ಭುತ ಜಾನಪದ ಕಲ್ಪನೆಯಾಗಿದೆ. 'ಆಕಾಶ ಜಾನಪದ' ದಲ್ಲಿ ಹಂಪನಾ ಅವರು ಇದುವರೆಗೆ ಅಜ್ಞಾತವಾಗಿದ್ದ ಹೊಸ ಮುಖವಾದ ಆಕಾಶದ ಬಗೆಗಿನ ಜಾನಪದವನ್ನು ಪರಿಚಯಿಸಿರುವುದರ ಬಗ್ಗೆ ಹೇಳಿ ಇದು ವಿಶಿಷ್ಟವಾದದು ಎಂಬುದಾಗಿ ಗೌಡರು ಹೇಳುತ್ತಾರೆ. 'ಹಳ್ಳಿಯ ಆಟಗಳು' ಎಂಬ ಲೇಖನದಲ್ಲಿ ಹಳ್ಳಿಯ ಜನಪದ

ಆಟಗಳು ಮಕ್ಕಳ ಮನಸ್ಸು ವಿಕಾಸವಾಗಲು ಹಾಗೂ ಮನರಂಜನೆ ನೀಡಲು ಸಹಾಯವಾಗುತ್ತವೆ ಎಂಬುದನ್ನು ವಿಶ್ಲೇಷಿಸಿ ಗಂಡು-ಹೆಣ್ಣು ಮಕ್ಕಳ ಆಟಗಳು, ಮನೆಯ ಒಳಗಿನ-ಹೊರಗಿನ ಆಟಗಳನ್ನು ಪರಿಚಯಿಸಿದ್ದಾರೆ. ಪಾಶ್ಚಿಮಾತ್ಯ ಆಟಗಳಿಗೆ ಮಾರುಹೋಗುತ್ತಿರುವ ಸಂದರ್ಭದಲ್ಲಿ ಭಾರತೀಯರನ್ನು ಎಚ್ಚರಿಸುವ ಲೇಖನ ಇದಾಗಿದೆ. ಒಗಟಿನ ಉಗಮ, ವಿಕಾಸ, ಸ್ವರೂಪ, ಲಕ್ಷಣ ಮುಂತಾದವುಗಳನ್ನು 'ಒಗಟುಗಳು' ಲೇಖನದಲ್ಲಿ ಹೇಳಿದ್ದರೆ, 'ಗಾದೆಗಳು ಮತ್ತು ಒಗಟುಗಳು' ಲೇಖನದಲ್ಲಿ ಒಗಟುಗಳ ಬಗ್ಗೆ ಮೇಲಿನಂತೆ ಹೇಳಿ, ಗಾದೆ ಪದದ ಅರ್ಥವ್ಯಾಪ್ತಿ ವಿವರಿಸಿ ಗಾದೆಗಳಲ್ಲಿ ಕಾವ್ಯ ಮತ್ತು ಸಂಸ್ಕೃತಿ ಎಂಬ ಎರಡು ಮುಖಗಳಿರುವುದನ್ನು ಗುರುತಿಸಿದ್ದಾರೆ. ಗಾದೆಗಳ ಕಾವ್ಯಾತ್ಮಕ ಅಂಶಗಳಾದ ಪ್ರಾಸ, ಯಮಕ, ಶ್ಲೇಷೆ, ಭಾವಸಾಂದ್ರತೆ, ಚಿಂತನಶೀಲತೆ ಬಗ್ಗೆ ಚರ್ಚಿಸಿದ್ದಾರೆ. ಗಾದೆಗಳಲ್ಲಿ ಬರುವ ಕೃಷಿ, ಚಾರಿತ್ರಿಕ ಅಂಶಗಳನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

'ಮಲ್ಲಿಗೆದಂಡೆ-ಒಂದು ಸಮೀಕ್ಷೆ' ಲೇಖನದಲ್ಲಿ ಕಾಪಸೆ ರೇವಪ್ಪನವರು ಮತ್ತು ಅವರ ಗೆಳೆಯರು ಕನ್ನಡ ಸಾಹಿತ್ಯದ ಭಾಷೆ. ಛಂದಸ್ಸು, ಭಾವ, ಲಯಗಳಿಗೆ ಹೊಸ ಆಯಾಮ ನೀಡಿರುವುದನ್ನು ಹೇಳಿ, ಈ ಕೃತಿ ಜನಪದ ಸಾಹಿತ್ಯದಿಂದ ಕನ್ನಡ ಸಾಹಿತ್ಯಕ್ಕೆ ಹೊಸ ದಾರಿ, ಧ್ವನಿ, ಬನಿಯನ್ನು ನೀಡಿದ್ದು ಇದು ಮಹತ್ವದ ಕೃತಿ ಎಂದು ಪ್ರಶಂಸೆಯನ್ನು ಮಾಡಿದ್ದಾರೆ. ರಗಳೆ ಮೂಲತಃ ಜಾನಪದ ಛಂದಸ್ಸು. ಹಳ್ಳಿಯವನಾದ ಹರಿಹರ ರಗಳೆ ಛಂದಸ್ಸನ್ನು ಬಳಸಿದ್ದು ಅವನ ರಗಳೆಗಳು ಜನಪದ ಖಂಡಕಾವ್ಯ, ಕಥನ ಗೀತೆಗಳನ್ನು ಹೋಲುತ್ತವೆ. ವಸ್ತು, ಭಾವ, ಭಾಷೆ, ಛಂದಸ್ಸು, ನಿರೂಪಣೆ, ಸಂಪ್ರದಾಯ, ಸಂದರ್ಭ, ಮನೋಧರ್ಮ ಎಲ್ಲ ದೃಷ್ಟಿಯಿಂದಲೂ ಹರಿಹರನಲ್ಲಿ ಜನಪದ ಆಶಯಗಳೇ ತುಂಬಿತುಳುಕಿವೆ ಎಂದು 'ರಗಳೆ ಸಾಹಿತ್ಯದಲ್ಲಿ ಜಾನಪದ' ಎಂಬ ಲೇಖನದಲ್ಲಿ ಅಭಿಪ್ರಾಯಿಸಿದ್ದಾರೆ.

ಲಕ್ಕಪ್ಪಗೌಡರ ಸಂಪಾದನಾ ಕೃತಿ "ವಿಶಿಷ್ಟ ಜಾನಪದ" ಎಂಬುದು. ೧೯೮೩ರಲ್ಲಿ ಬಿ.ಆರ್. ಪ್ರಾಜೆಕ್ಟ್‌ನ ಸ್ನಾತಕೋತ್ತರ ಕೇಂದ್ರದಲ್ಲಿ ನಡೆಸಿದ 'ವಿಶಿಷ್ಟ ಜಾನಪದ' ಎಂಬ ವಿಚಾರ ಸಂಕಿರಣದ ಪ್ರಬಂಧಗಳು ಇದರಲ್ಲಿವೆ. ಧಾರ್ಮಿಕ ಜಾನಪದ, ಸಾಮಾಜಿಕ ಜಾನಪದ, ಪ್ರಾಕೃತಿಕ ಜಾನಪದ, ವೃತ್ತಿ ಜಾನಪದ ಎಂಬುದಾಗಿ ನಾಲ್ಕು ವಿಭಾಗ ಮಾಡಿಕೊಂಡು ನಡೆಸಿದ ಚರ್ಚೆ ಇದಾಗಿತ್ತು. ಜಾನಪದ ಅಧ್ಯಯನಕ್ಕೆ ಒಂದು ಹೊಸ ಆಯಾಮ ನೀಡಿದುದಾಗಿದೆ.

"ಮಲ್ಲಿಗೆ ಮೊಗ್ಗು ಸುರಿದಾವೆ" ಎಂಬ ಕೃತಿಯನ್ನು ಬಸವರಾಜ ನೆಲ್ಲಿಸರರೊಂದಿಗೆ ಸೇರಿ ಲಕ್ಕಪ್ಪಗೌಡರು ಸಂಪಾದಿಸಿದ್ದಾರೆ. ೧೯೯೨ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕೆಮ್ಮಣ್ಣುಗುಂಡಿಯಲ್ಲಿ ಜಿಲ್ಲಾಡಳಿತ ಏರ್ಪಡಿಸಿದ್ದ ಮೂರು ದಿನದ ಉತ್ಸವ "ಚೈತ್ರಶ್ರೀ" ಅಂಗವಾಗಿ ರೂಪುಗೊಂಡಿರುವ ಕೃತಿ ಇದು. ಇದರಲ್ಲಿ ಇಪ್ಪತ್ತೆಂಟು ಲೇಖನಗಳಿದ್ದು, ನಾಡಿನ ವಿವಿಧ ಜಾನಪದ ವಿದ್ವಾಂಸರಿಂದ ಬರೆಸಿರುವ ಮೌಲಿಕವಾದ ವಿಷಯವನ್ನೊಳಗೊಂಡ ಕೃತಿ ಇದಾಗಿದೆ. "ಮಲೆನಾಡು ಜಾನಪದ" ಎಂಬ ಕೃತಿ ೧೯೮೨ರಲ್ಲಿ ನಡೆಸಿದ ಮಲೆನಾಡು ಜಾನಪದ ಎಂಬ ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ಪ್ರಬಂಧಗಳ ಸಂಕಲನ. ಮಲೆನಾಡು ಪ್ರದೇಶದಲ್ಲಿರುವ ವಿವಿಧ ರೀತಿಯ ಜಾನಪದಗಳ ವೈಶಿಷ್ಟ್ಯವನ್ನು ಒಳಗೊಂಡಿರುವ ಪ್ರಬಂಧಗಳು ಇದರಲ್ಲಿವೆ. "ಡೊಳ್ಳುಮೇಳ" ಎಂಬುದು ಇವರ ಮತ್ತೊಂದು ಕೃತಿಯಾಗಿದ್ದು ಡೊಳ್ಳುವಿನ ಇತಿಹಾಸ, ಪರಂಪರೆ, ಆ ಕಲೆಯ ಬಗೆಗಿನ ಹಿನ್ನೆಲೆಯಲ್ಲಿರುವ ಆಚರಣೆಗಳನ್ನು ಕೃತಿ ತಿಳಿಸುತ್ತದೆ.

ಮೇಲಿನ ಕೃತಿಗಳಲ್ಲದೆ ಬೇರೆ ಬೇರೆ ಕಡೆ ಮಂಡಿಸಿರುವ ಪ್ರಬಂಧಗಳು, ಲೇಖನಗಳು, ಮುನ್ನುಡಿ ಬರೆಹಗಳು ಸಾಕಷ್ಟಿವೆ. ಅವುಗಳಲ್ಲಿ "ಕರ್ನಾಟಕದ

ಜನಪದ ಮಹಾಕಾವ್ಯಗಳು" ಎಂಬ ವಿಚಾರ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಅಲ್ಲಿ ಮಾಡಿದ ಭಾಷಣ ಪ್ರಮುಖವಾದುದಾಗಿದೆ. ಶಿಷ್ಟ ಮಹಾಕಾವ್ಯಗಳಿಗೂ ಜನಪದ ಮಹಾಕಾವ್ಯಗಳಿಗೂ ಇರುವ ಅಂತರವನ್ನು ತಿಳಿಸಿ, ವ್ಯಾಪಕ ಸಂಸ್ಕೃತಿಗೆ ಭಿನ್ನವಾದ ನೂರಾರು ಅವ್ಯಾಪಕ ಸಂಸ್ಕೃತಿಗಳು ಇದ್ದು ಸಾಂಸ್ಕೃತಿಕ ವಿಭಿನ್ನತೆಯಿಂದ ಜನಪದ ಮಹಾಕಾವ್ಯಗಳು ಹುಟ್ಟಿಬಂದಿರುವುದರಿಂದ ಅವುಗಳ ಲಕ್ಷಣ ನಿರ್ಣಯ, ಮೌಲ್ಯ ವಾಖ್ಯಾನಗಳಿಗೆ ವಿಶಿಷ್ಟವಾದ ಮಾನದಂಡಗಳನ್ನು ಕಂಡುಹಿಡಿಯಬೇಕು ಎಂದು ಹೇಳಿದ್ದಾರೆ. ಜನಪದ ಮಹಾಕಾವ್ಯಗಳ ಅಧ್ಯಯನಕಾರರಿಗೆ ಇಲ್ಲಿಯ ಪ್ರಬಂಧಗಳು ಹಾಗು ಗೌಡರ ಸಲಹೆ ಅರ್ಥಪೂರ್ಣವಾಗಿವೆ.

ಇದುವರೆಗೂ ನೋಡಿದ ಜಾನಪದ ಕೃತಿಗಳು ಹಾಗೂ ಲೇಖನಗಳನ್ನಲ್ಲದೆ ಲಕ್ಕಪ್ಪಗೌಡರು ವಿವಿಧ ಕೃತಿಗಳಿಗೆ ಬರೆದಿರುವ ಮುನ್ನುಡಿಗಳು ಎರಡುನೂರ ಐವತ್ತಕ್ಕೂ ಹೆಚ್ಚಿದ್ದು "ಪುಸ್ತಕ ಮಿಂಚು" ಎಂಬ ಕೃತಿಯಲ್ಲಿ ೧೬೭ ಮುನ್ನುಡಿಗಳು ೧೦೦೮ರಲ್ಲಿ ಮುದ್ರಣಗೊಂಡಿವೆ. ಇವುಗಳಲ್ಲಿ ಜಾನಪದಕ್ಕೆ ಸಂಬಂಧಿಸಿದ ೩೨ ಮುನ್ನಡಿ ಬರಹಗಳಿದ್ದು ಅವುಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ನೋಡಬಹುದು. ಅವುಗಳೆಲ್ಲವೂ ವೈವಿಧ್ಯ ಪೂರ್ಣವಾಗಿರುವುದು ಇಲ್ಲಿಯ ವಿಶೇಷ. ಡಾ. ವೀರಣ್ಣ ದಂಡೆ ಅವರ 'ಹಾಲುಮತದ ಕಾವ್ಯ' ದ ಬಗ್ಗೆ ಹೇಳುತ್ತಾ ಇದು ಹಿಂದಿನ ಜನಪದ ಮಹಾಕಾವ್ಯಗಳಿಗಿಂತ ವಿಭಿನ್ನವಾಗಿದ್ದು, ಇಲ್ಲಿಯ ಘಟನೆಗಳು ಒಂದಕ್ಕೊಂದು ಬಿಗಿಯಾಗಿ ಕೂಡಿಕೊಂಡಿದ್ದು ಅವಿಚ್ಛಿನ್ನತೆ ಮತ್ತು ಅಖಂಡತೆಯ ಪ್ರಭಾವವನ್ನು ಸೃಷ್ಟಿಸಿವೆ ಎಂದು ಹೇಳುತ್ತಾರೆ. ಡಾ. ಬಸವರಾಜ ನಾಯಕ್ ಅವರ 'ಗಿಲ್ಗಮೇಶ' ಇದು ಸುಮೇರಿಯನ್ ಭಾಷೆಯ ಜನಪದ ಮಹಾಕಾವ್ಯದ ಅನುವಾದ. ಇದು ಇಲಿಯಡ್, ಒಡಿಸ್ಸಿ ಮಹಾಕಾವ್ಯಗಳಿಗಿಂತ ಅತ್ಯಂತ ಪುರಾತನವಾಗಿದ್ದು ಜಾನಪದ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ಎನ್ನುತ್ತಾರೆ. 'ದೇವುಡು' ಕೃತಿಯ

ಮುನ್ನುಡಿಯಲ್ಲಿ ಕನ್ನಡ ಜನಪದವು ಇನ್ನೂ ಖಚಿತವಾದ ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ನೆಲೆಗಳನ್ನು ಕಂಡುಕೊಳ್ಳದಿದ್ದ ಸಂದರ್ಭದಲ್ಲಿ ಅವರು ಕರ್ನಾಟಕ ಸಂಸ್ಕೃತಿ ಎಂಬ ಕೃತಿಯ ಮಲಕ ಜಾನಪದದ ಹಲವು ಮುಖಗಳನ್ನು ಅಲ್ಲಿ ಪ್ರಥಮ ಬಾರಿಗೆ ಶಾಸ್ತ್ರೀಯವಾಗಿ ವಿವೇಚಿಸಿರುವುದು, ಕರ್ನಾಟಕ ಜಾನಪದ ಚಿಂತನೆಯಲ್ಲಿ ಈ ಕೃತಿ ಒಂದು ಮೈಲಿಗಲ್ಲು ಎಂದು ಅಭಿಪ್ರಾಯ ಪಟ್ಟಿದ್ದಾರೆ. 'ಗ್ರಾಮಸಂಸ್ಕೃತಿ ಮಾಲೆ' ಕೃತಿಯಲ್ಲಿ ಮರೆಯಾಗುತ್ತಿರುವ ಗ್ರಾಮೀಣ ಸಂಸ್ಕೃತಿಯ ಒಂದು ಆಕರ್ಷಕ ಅಧ್ಯಾಯವನ್ನು ನಮ್ಮ ಮುಂದೆ ತೆರೆದಿಡುತ್ತದೆಂದು ಹೇಳುತ್ತಾರೆ. "ಸುವರ್ಣ ಜಾನಪದ" ಸಂಪುಟಕ್ಕೆ ಬರೆದಿರುವ ಮುನ್ನುಡಿಯಲ್ಲಿ ಜಾನಪದದ ಮಹತ್ವವನ್ನು ಹೇಳಿ ಮುಖ್ಯವಾದ ನೂರು ಲೇಖನಗಳನ್ನು ಮುದ್ರಿಸಿರುವ ಪ್ರಸ್ತುತೆಯನ್ನು ವಿವರಿಸಿದ್ದಾರೆ. 'ಶಿಷ್ಟಸಾಹಿತ್ಯ ಮತ್ತು ಜಾನಪದ ಸಂವೇದನೆ ಮಾಲೆ' ಯಲ್ಲಿ ಹಳೆಗನ್ನಡದಿಂದ ಆಧುನಿಕ ಕನ್ನಡದವರೆಗೆ ಜಾನಪದ ಪ್ರೇರಣೆ ಇರುವ ಸಂವೇದನೆಯನ್ನು ತೋರಿಸಿದ್ದಾರೆ. 'ಜಾನಪದ ಅಧ್ಯಯನ'ದಲ್ಲಿ ಜನಪದ ಗೀತೆ, ಕತೆ, ಕಾವ್ಯ, ಗಾದೆ, ಒಗಟುಗಳಲ್ಲದೆ ಅರಿವಿಗೆ ಬಾರದೆ ಅಜ್ಞಾನ ಮೂಲೆಗೆ ಸರಿದಿದ್ದ ಇತರ ಪ್ರಕಾರಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಿರುವುದರ ಬಗ್ಗೆ ಪ್ರಶಂಸೆ ಮಾಡಿದ್ದಾರೆ. ಹಂಪನಾ ಅವರು ಸಂಗ್ರಹಿಸಿರುವ 'ನೋಂಪಿಯ ಕಥೆಗಳು' ಎಂಬುದರಲ್ಲಿ ಇಲ್ಲಿಯ ಕಥೆಗಳು ಕಥನಕೌಶಲದಿಂದ ಕೂಡಿರುವುದನ್ನು, ಅಜ್ಞಾತವಾಗಿದ್ದವುಗಳನ್ನು ಬೆಳಕಿಗೆ ತಂದಿರುವುದರ ಬಗ್ಗೆ ಪ್ರಸ್ತಾಪಿಸಿದ್ದಾರೆ. 'ಕರ್ನಾಟಕ ಮುಸ್ಲಿಂ ಜಾನಪದ' ಕೃತಿಯ ಬಗ್ಗೆ ಹೇಳುತ್ತಾ ಇದು ಕನ್ನಡೇತರ ನೆಲದಿಂದ ಬಂದು ಕನ್ನಡ ಭೂಮಿಯಲ್ಲಿ ನೆಲೆಸಿರುವ ಮುಸ್ಲಿಂ ಜನಾಂಗದ ಜಾನಪದವನ್ನು ಅರಿಯಲು ತುಂಬಾ ಸಹಾಯಕವಾಗಿದೆ ಎಂದಿದ್ದಾರೆ. "ಕರ್ನಾಟಕ ಬುಡಕಟ್ಟುಗಳ ಅಧ್ಯಯನ"ದ ಎರಡು ಸಂಪುಟಗಳ ಕೃತಿಗಳನ್ನು ಜಾನಪದ ಅಕಾಡೆಮಿ ಅಧ್ಯಕ್ಷರಾಗಿದ್ದಾಗ ಪ್ರಕಟಿಸಿದರು. ಇಲ್ಲಿ ಬುಡಕಟ್ಟು ಪದದ ಅರ್ಥವ್ಯಾಪ್ತಿಯಿಂದ

ಹಿಡಿದು, ಅವರ ಜೀವನಕ್ರಮಗಳನ್ನು ಇದುವರೆಗೆ ಮಾಡಿರುವ ಅಧ್ಯಯನವನ್ನಿಟ್ಟುಕೊಂಡು ಈಗ ಅದರ ಅಧ್ಯಯನ ಹೇಗೆ ಸಾಗಬೇಕು ಎಂಬುದರ ಬಗೆಗಿನ ಪೂರ್ಣ ಮಾಹಿತಿಯನ್ನು ಒದಗಿಸಿದ್ದಾರೆ. ಅವರು ಅಕಾಡೆಮಿಗೆ ಅಧ್ಯಕ್ಷರಾಗಿದ್ದ ಅವಧಿಯಲ್ಲಿಯ ಹೊರತಂದ "ಜಾನಪದ ಕೈಪಿಡಿ" ಯಲ್ಲಿ ಜಾನಪದ ಸಂಗ್ರಹ, ಸಂಪಾದನೆ, ಅಧ್ಯಯನಗಳು ಆರಂಭವಾಗಿ ಒಂದು ಶತಮಾನ ಕಳೆದರೂ ಆ ಕ್ಷೇತ್ರದಲ್ಲಿ ಬಳಕೆಯಾಗುವ ಪರಿಕಲ್ಪನೆಗಳನ್ನು ಮತ್ತು ಪರಿಭಾಷಿಕ ಪದಗಳನ್ನು ವಿವರಿಸುವ ಒಂದು ಗ್ರಂಥ ಇದುವರೆಗೂ ರಚನೆಯಾಗಿಲ್ಲ. ಜಾನಪದ ವಿಜ್ಞಾನದ ಶಾಸ್ತ್ರೀಯ ಬರವಣಿಗೆಗೆ ಈ ಕೃತಿ ಅನುವು ಮಾಡಿಕೊಡುತ್ತದೆಂದು ಹೇಳುತ್ತಾರೆ. ಹೀಗೆ ಹಲವು ಜಾನಪದ ಕೃತಿಗಳ ಬಗೆಗಿನ ಮುನ್ನುಡಿ ಬರಹಗಳಿವೆ. ಒಟ್ಟಾರೆ ಈ ಕೃತಿ ಹಲವು ವಿಷಯಗಳನ್ನೊಳಗೊಂಡ ವಿಶ್ವಕೋಶದಂತೆ ಶಿಷ್ಟ ಮತ್ತು ಜಾನಪದ ಅಧ್ಯಯನಕಾರರಿಗೆ ಹಲವು ರೀತಿಯಲ್ಲಿ ಅನುಕೂಲವಾಗುತ್ತದೆ.

'ಇಬ್ಬನಿ' ಎಂಬುದು ಸ್ವತಂತ್ರ ಗಾದೆಗಳ ಕೃತಿಯಾಗಿದ್ದು, ಸ್ವತಃ ಗೌಡರೇ ರಚಿಸಿದ್ದಾರೆ. ಇಂತಹ ಕೆಲಸ ಮಾಡಲು ಜನಪರವಾದ ಕಾಳಜಿ ಇರುವವರಿಗೆ ಮಾತ್ರ ಸಾಧ್ಯ. ಇದು ಪೂರ್ಣ ಜಾನಪದವಲ್ಲದಿದರೂ ಜಾನಪದದಂತೆಯೇ ಇರುವ ಕೃತಿಯಾಗಿದೆ. ಲಕ್ಕಪ್ಪಗೌಡರು ಸ್ವೋಪಜ್ಞ ಕವಿ. ಅವರ ಕವನ ಸಂಕಲನಗಳಲ್ಲಿ ಭಾವತೀವ್ರತೆ, ಸಾಮಾಜಿಕ ಅವ್ಯವಸ್ಥೆಗಳ ಬಗ್ಗೆ ಆಕ್ರೋಶ, ಸಮಾಜದ ಬಗ್ಗೆ ಒಲವು, ಸಾತ್ವಿಕತೆ, ರಾಜಕೀಯ ವ್ಯವಸ್ಥೆಯ ಬಗ್ಗೆ ವ್ಯಂಗ್ಯ, ಸತ್ಯಸೌಂದರ್ಯ, ಮಾನವೀಯ ಮೌಲ್ಯ, ವಿವೇಚನೆ ಎಲ್ಲವೂ ಇದೆ. ಗೌಡರ ಚುಟುಕುಗಳಲ್ಲಿ ವಸ್ತು ವೈವಿಧ್ಯತೆಯಿದ್ದು, ರೂಪಕ ಪ್ರತಿಮೆ, ಸಂಕೇತಗಳ ಮೂಲಕ ಜೀವನದ ವಿವರಗಳನ್ನು ಹೇಳುವುದನ್ನು ಕಾಣಬಹುದು.

ಗೌಡರು ಕವಿ ಹೇಗೋ ಹಾಗೆಯೇ ಉತ್ತಮ ನಾಟಕಕಾರರೂ ಹೌದು. ಹನ್ನೆರಡನೆ ಶತಮಾನದ ಸಿದ್ಧರಾಮನನ್ನು ಕುರಿತ ನಾಟಕವೇ

'ಕಾಯಕಯೋಗಿ'. ಅಂಬೇಡ್ಕರ್ ಸಮಾನತಾವಾದಿ, ಮಾನವತಾವಾದಿ ಎಂಬುದನ್ನು ಹೇಳುವುದೇ ಜೀವನ ಚರಿತ್ರೆಯಾದ 'ದಲಿತ ಸೂರ್ಯ' ಕೃತಿ. ಅವರು ಶ್ರೇಷ್ಠ ಕತೆಗಾರರೂ ಆಗಿದ್ದಾರೆ. ಅವರ ಎರಡು ಕಥಾಸಂಕಲನಗಳಲ್ಲಿಯೂ ಗ್ರಾಮೀಣ ಬದುಕಿನ ಪರಿಸರ ಹಾಸುಹೊಕ್ಕಾಗಿ ಬಂದಿದೆ. ಜನಪದ ನುಡಿಗಟ್ಟು, ಗಾದೆ, ನಂಬಿಕೆ, ನಡಾವಳಿ ಮುಂತಾದವುಗಳೆಲ್ಲವನ್ನೂ ಅವರ ಕಥೆಗಳಲ್ಲಿ ನೋಡಬಹುದಾಗಿದೆ. ಜೊತೆಗೆ ಶ್ರೇಷ್ಠ ವಿಮರ್ಶಕರೂ ಹೌದು. ಯಾವುದೇ ರೀತಿಯ ಪೂರ್ವಾಗ್ರಹವಿಲ್ಲದ, ನಿಷ್ಪಕ್ಷವಾದ, ವಸ್ತುನಿಷ್ಠೆಯ ಸಮತೂಕದ ವಿಮರ್ಶಕರೆಂಬುದನ್ನು ಅವರ ವಿಮರ್ಶಾ ಗ್ರಂಥಗಳಲ್ಲಿ ಕಾಣಲು ಸಾಧ್ಯ. ಇವರ ಒಡಿಸ್ಸಿ, ಇಲಿಯಡ್, ದೀನಬಂಧು, ಪದ್ದು-ಹದ್ದು, ಕಾಯಕವೇ ಕೈಲಾಸ ಮುಂತಾದವು ಮಕ್ಕಳ ಸಾಹಿತ್ಯ ಕೃತಿಗಳಾಗಿದ್ದು ವಸ್ತುವಿನ ಆಯ್ಕೆ, ನಿರೂಪಣೆ, ಸರಳಶೈಲಿ, ಸೊಗಸಾದ ಸಂಭಾಷಣೆ ಎಲ್ಲವೂ ಮಕ್ಕಳ ಮನಸ್ಸಿಗೆ ಸುಲಭವಾಗಿ ಮುಟ್ಟುವಂತಹವುಗಳಾಗಿವೆ. "ಅನ್ಯಾರ್ಥಕೋಶ" ಎಂಬುದು ವಿಶಿಷ್ಟ ಕೃತಿಯಾಗಿದ್ದು ನಾ ಕಸ್ತೂರಿಯವರ ಹಾಗೆಯೇ ಇವರೂ ಕೂಡ ಹಾಸ್ಯ-ವಿಡಂಬನೆಗಳನ್ನು ತಮ್ಮ ಕೃತಿಯಲ್ಲಿ ತಂದಿದಾರೆ. ಇಲ್ಲಿಯ ಪದಗಳ ಸೃಷ್ಟಿ, ತಿರುಗು ಮುರುಗಾದ ಚಿತ್ರವಿಚಿತ್ರಗಳ ಅರ್ಥಗಳನ್ನು ನೀಡುವುದೆಲ್ಲವೂ ಸ್ವಾರಸ್ಯಕರವಾಗಿದ್ದು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಇದೊಂದು 'ಅನರ್ಘ್ಯರತ್ನ'ವೇ ಆಗಿದೆ.

"ಶ್ರೀ ರಾಮಾಯಣ ದರ್ಶನಂ-ವಿಮರ್ಶಾತ್ಮಕ ಅಧ್ಯಯನ' ಎಂಬ ಕೃತಿ ಇವರ ಮಹತ್ವಾಕಾಂಕ್ಷೆಯ ಕೃತಿ. ಹದಿನೆಂಟು ವರ್ಷಗಳ ಸತತ ಪರಿಶ್ರಮದ ಅಧ್ಯಯನದಿಂದ ರೂಪುಗೊಂಡಿದೆ. ಇದರಲ್ಲಿ ಗೌಡರ ಪ್ರತಿಭೆ, ವಿದ್ವತ್ತುಗಳು ಸಾಕಾರಗೊಂಡಿವೆ. ರಾಮಾಯಣಗಳ ತೌಲನಿಕ ವಿವೇಚನೆ ನಡೆದಿದೆ. ಕುವೆಂಪು ಅವರ ಮಹಾಕಾವ್ಯಕ್ಕೆ ಎಲ್ಲಿಯೂ ಲೋಪ ಬರದಂತೆ

ಎಲ್ಲವನ್ನೂ ಸಮತೋಲನ ದೃಷ್ಟಿಯಿಂದ ಮಾಡಿರುವ ಅಧ್ಯಯನ ಇದಾಗಿದ್ದು, ಕನ್ನಡ ಸಾಹಿತ್ಯ ಸಂಶೋಧಾ ಕ್ಷೇತ್ರದಲ್ಲಿಯೇ ಇದೊಂದು ಶ್ರೇಷ್ಠ ಉದ್ಗ್ರಂಥವಾಗಿದೆ. ಇದೇ ಅಧ್ಯಯನದ ಮುಂದುವರಿದ ಭಾಗವಾಗಿ "ಶ್ರೀ ರಾಮಾಯಣ ದರ್ಶನಂ ಪಾತ್ರಲೋಕ" ಎಂಬ ಕೃತಿಯನ್ನು ಗೌಡರು ಪ್ರಕಟಿಸಿದ್ದಾರೆ. ಇದರಲ್ಲಿ ಪ್ರಧಾನ ಪುರುಷ ಪಾತ್ರಗಳು, ಪ್ರಧಾನ ಸ್ತ್ರೀ ಪಾತ್ರಗಳು ಮತ್ತು ಇತರೆ ಪಾತ್ರಗಳೆಂದು ವಿಭಾಗಿಸಿಕೊಂಡು ಪಾತ್ರಗಳ ಪರಿಕಲ್ಪನೆಯ ದರ್ಶನವನ್ನು ಓದುಗರಿಗೆ ನೀಡಿರುವುದು ಸೌಭಾಗ್ಯವೆಂದೆನ್ನಬೇಕು.

ಹಾಗೆ, ಬಹುಮುಖ ಪ್ರತಿಭೆಯ ವ್ಯಕ್ತಿತ್ವದ ಎಚ್.ಜೆ. ಲಕ್ಕಪ್ಪಗೌಡರ ಸಾಧನೆಗಳನ್ನು ಕೇವಲ ಪುಟ್ಟ ಕೃತಿಯಲ್ಲಿ ಹತ್ತಾರು ಪುಟಗಳಲ್ಲಿ ಹಿಡಿದಿಡುವ ಕೆಲಸ ಅಸಾಧ್ಯವೇ ಸರಿ. ಕೆರೆಯ ಬದಿಯಲ್ಲಿ ಕುಳಿತು ಒಂದು ಬೆರಳನ್ನು ನೀರಿನಲ್ಲಿ ಅದ್ದಿ ಚೀಪಿದ ಕೆಲಸ ಇದಾಗಿದೆ. ಇವರ ಸಾಹಿತ್ಯದ, ವ್ಯಕ್ತಿತ್ವದ ನಾನಾ ಮಗ್ಗುಲುಗಳನ್ನು ತಿಳಿಯಬೇಕಾದರೆ ವಿಸ್ತೃತವಾದ ಗ್ರಂಥದ ಅವಶ್ಯಕತೆ ಇದೆ.

* * *

ಡಾ.ಎಚ್.ಜೆ. ಲಕ್ಕಪ್ಪಗೌಡರು ಸ್ವಂತ ಪ್ರತಿಭೆಯಿಂದ, ಸ್ವಸಾಹಸದಿಂದ ಜೀವನದಲ್ಲಿ ಯಶಸ್ಸು ಕಂಡವರು. ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಉಪನ್ಯಾಸಕರಾಗಿ, ದಕ್ಷ ಆಡಳಿತಗಾರರಾಗಿ ಹೆಸರಾದವರು. ಸೃಜನಶೀಲ ಸಾಹಿತ್ಯ ಕೃಷಿಯ ಜೊತೆಗೆ ಜಾನಪದದಲ್ಲಿ ವಿಶೇಷವಾಗಿ ಕೆಲಸ ಮಾಡಿದವರು. ಸ್ವತಃ ಕೇತ್ರಕಾರ್ಯ ಮಾಡಿ ಜನಪದ ಕಥೆಗಳನ್ನು ಸಂಗ್ರಹಿಸಿ ಸಂಪಾದಿಸಿ ಪ್ರಕಟಿಸಿದ್ದಾರೆ. ತಾವು ಅಧಿಕಾರಿಯಾಗಿದ್ದ ಕಡೆಗಳಲ್ಲಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಜಾನಪದದ ವಿವಿಧ ಆಯಾಮಗಳಿಗೆ ಸಂಬಂಧಿಸಿದಂತೆ ಮೌಲಿಕ ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡು ಆಗು ಮಾಡಿದ್ದಾರೆ; ಅನೇಕ ವಿದ್ವಾಂಸರ ಸೃಷ್ಟಿಗೆ ಕಾರಣರಾಗಿದ್ದಾರೆ; ಜಾನಪದ ಕ್ಷೇತ್ರಕ್ಕೆ ಪ್ರವೇಶಿಸುವವರಿಗೆ ಪ್ರೇರಕರಾಗಿದ್ದಾರೆ. ಉತ್ಕೃಷ್ಟ ವಾಗ್ಮಿಯೂ ಕನ್ನಡ ನಾಡು ನುಡಿ ಬಗೆಗೆ ಅನನ್ಯ ಕಾಳಜಿ ಉಳ್ಳವರೂ ಆದ ಶ್ರೀಯುತರ ಆತ್ಮೀಯ ಪರಿಚಯ ಪ್ರಸ್ತುತ ಗ್ರಂಥದಲ್ಲಿ ದೊರೆಯುತ್ತದೆ.

ಇದು ಡಾ. ಹಂಪನಹಳ್ಳಿ ತಿಮ್ಮೇಗೌಡರ ಬರಹ.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು
ಬೆಂಗಳೂರು